ಸಂಪುಟ 01 । ಸಂಚಿಕೆ 77 । ಸೋಮವಾರ 2 ಫೆಬ್ರುವರಿ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1 ವಿಶ್ವ ತೇವಭೂಮಿ ದಿನ

ಪ್ರತಿ ವರ್ಷ ಫೆಬ್ರವರಿ 2 ರಂದು, ವಿಶ್ವ ತೇವಭೂಮಿ ದಿನವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಚರಿಸಲಾಗುತ್ತದೆ. ಈ ದಿನವು ಫೆಬ್ರವರಿ 2, 1971 ರಂದು ಇರಾನ್‌ನ ರಾಮ್ಸರ್‌ನಲ್ಲಿ ತೇವಭೂಮಿಗಳ ಸಮಾವೇಶವನ್ನು ಅಳವಡಿಸಿಕೊಂಡ ದಿನಾಂಕವನ್ನು ಸೂಚಿಸುತ್ತದೆ. ಇದನ್ನು ಮೊದಲು 1997 ರಲ್ಲಿ ಆಚರಿಸಲಾಯಿತು.

2) ಆರ್‌ಎ ಜಾಗೃತಿ ದಿನ

ಆರ್‌ಎ ಜಾಗೃತಿ ದಿನವು ರುಮಟಾಯ್ಡ್ ಸಂಧಿವಾತ ಜಾಗೃತಿ ದಿನವಾಗಿದೆ ಮತ್ತು ರುಮಟಾಯ್ಡ್ ಸಂಧಿವಾತದಿಂದ ಬಳಲುತ್ತಿರುವ ರೋಗಿಗಳಿಗೆ ಜಾಗೃತಿ ಮೂಡಿಸಲು ಫೆಬ್ರವರಿ 2 ರಂದು ಆಚರಿಸಲಾಗುತ್ತದೆ.

## ಸುಭಾಷಿತ

ತನ್ನ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿರುವವನಿಗೆ ಜಗತ್ತು ಎಂದೂ ಬೇಸರದ್ದಾಗಿ ಕಾಣುವುದಿಲ್ಲ.

– ಮಹಾತ್ಮಾ ಗಾಂಧಿಜೀ

# ಪ್ರಜಾಸೌಧ ಸ್ಥಳ ದಾನದಲ್ಲಿ ಸ್ವಾರ್ಥ ಹಿತಾಸಕ್ತಿ ಇಲ್ಲ: ಮದರಕಲ್ಲ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದಲ್ಲಿ ನಿರ್ಮಾಣವಾಗಲಿರುವ ಪ್ರಜಾ ಸೌಧ ಕಟ್ಟಡಕ್ಕೆ ಸ್ಥಳ ದಾನ ಮಾಡಿರುವುದರ ಹಿಂದೆ ಪಟ್ಟಣದ ಅಭಿವೃದ್ಧಿಯ ಹಿತ ಹೊರತುಪಡಿಸಿದರೆ ಯಾವ ಸ್ವಾರ್ಥ ಹಿತಾಸಕ್ತಿಯೂ ಇಲ್ಲ ಎಂದು ಪುರಸಭೆ ಮಾಜಿ ಸದಸ್ಯ ಪ್ರಭುಗೌಡ ಮದರಕಲ್ಲ ಹೇಳಿದರು. ರವಿವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪ್ರಜಾಸೌಧ ಸ್ಥಳ ದಾನಿಗಳಿಂದ ಕರೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ ಕಳೆದ ಹತ್ತು ವರ್ಷಗಳಿಂದ ಪ್ರಜಾ ಸೌಧ ನಿರ್ಮಾಣಕ್ಕೆ ಸ್ಥಳ ಸಿಗದೇ ಇರುವುದರಿಂದ ಪಟ್ಟಣದ ಒಳಿತಿಗಾಗಿ ಜಿಲ್ಲಾಧಿಕಾರಿಗಳ ಹಾಗೂ ಶಾಸಕರ ವಿನಂತಿ ಮೇರೆಗೆ ನಮ್ಮ ಸ್ವಂತ ಮಾಲಕೀಯ 2 ಎಕರೆ ಜಮೀನನ್ನು ಏನನ್ನೂ ಪಡೆದುಕೊಳ್ಳದೆ ದಾನದ ರೂಪದಲ್ಲಿ ಕೊಟ್ಟಿದ್ದೇವೆ ಇದು ಕಳೆದ ಒಂದು ವರ್ಷದಿಂದ ನಡೆಯುತ್ತಿರುವ ಪ್ರಕ್ರಿಯೆಯಾಗಿದ್ದು ಇದರ ಕು-ರಿತು ಪತ್ರಿಕೆಗಳಲ್ಲಿಯೂ ವರದಿ ಪ್ರಕಟವಾಗಿವೆ. ಜಿಲ್ಲಾಧಿಕಾರಿಗಳು ಹಲವಾರು ಬಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಅಂತಿಮಗೊಳಿಸಿದ್ದಾರೆ ಆದರೀಗ ಕೆಲವರು ಹೋರಾಟ ಸಮಿತಿಯನ್ನು ಮಾಡಿಕೊಂಡು ಇದು ಪಟ್ಟಣದಿಂದ ದೂರವಾಗಿದ್ದು




ಸ್ಥಳಕೊಟ್ಟವರ ಸ್ವಾರ್ಥಸಾಸಕ್ತಿ ಇದೆ ಇದಕ್ಕಾಗಿ ಇವರು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದು ತಾಲೂಕ ಆಡಳಿತವು ಇವರೊಂದಿಗೆ ಶಾಮೀಲಾಗಿದೆ ಎಂದು ಆರೋಪಿಸಿದ್ದಾರೆ. ಈ ಎಲ್ಲಾ ಆರೋಪಗಳು ಸತ್ಯಕ್ಕೆ ದೂರವಾಗಿವೆ ನಾವು ಯಾವ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿಲ್ಲ, ಇದರಲ್ಲಿ ಶಾಸಕರ ಮತ್ತು ತಾಲೂಕ ಆಡಳಿತದ ಯಾವ ಹಸ್ತಕ್ಷೇಪವು ಇಲ್ಲ, ಎಲ್ಲವೂ ಸ್ಪಷ್ಟವಾಗಿದೆ ಇದರ ಕುರಿತು ಸಂಪೂರ್ಣ ದಾಖಲೆ ಪತ್ರಗಳನ್ನು ನಾವು ಕೊಡಲು ಸಿದ್ದರಿದ್ದೇವೆ. ನಾವು ಈ ಪಟ್ಟಣದಲ್ಲಿಯೇ ಹಲವಾರು ವರ್ಷಗಳಿಂದ ಜೀವಿಸುತ್ತಿದ್ದೇವೆ ನಮಗೂ ಊರಿನ ಕುರಿತು ಅಪಾರ ಕಾಳಜಿ ಇದೆ ನಮ್ಮ ಸಾಮಾಜಿಕ ಬದುಕು ಇಡೀ ಪಟ್ಟಣದ ಜನತೆಯ ಮುಂದೆ ಇದೆ ನಾವೆಂದೂ ಅನ್ಯಾಯ ಹಾಗೂ ಜನರಿಗೆ ಮೋಸ ಮಾಡುವಂತಹ ಕೆಲಸ ಮಾಡಿದವರಲ್ಲ.ಈ ಯೋಜನೆಯ ನಿರ್ಣಯ ಸರ್ಕಾರ ಭವಿಷ್ಯದ ದೃಷ್ಟಿಯಿಂದ ತೆಗೆದುಕೊಂಡಿದೆ. ಪಟ್ಟಣ ಮುಂದೆ ನಗರಸಭೆಯಾಗಿ ಪರಿವರ್ತನೆಯಾಗಲಿದೆ ಆಗ ಸ್ಥಳಗಳು ಸಿಗುವುದು ಕಷ್ಟ ಇದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಈಗಲಾದರೂ ಯಾರಾದರೂ ಪಟ್ಟಣದ ಸಮೀಪದಲ್ಲಿ ಸ್ಥಳ ಕೊಡಲು ಸಿದ್ದರಿದ್ದರೆ ನಮ್ಮದು ಯಾವುದೇ ಅಭ್ಯಂತರ ಇಲ್ಲ ಆದರೆ ಯಾವುದಾದರೂ ಸರ್ಕಾರಿ ಇಲಾಖೆಯ ಸ್ಥಳ ತೋರಿಸಿ ಇಲ್ಲಿ ಮಾಡಿ ಅಂತ ಹೇಳುವುದು ಸರಿಯಲ್ಲ ಅದು ಸಾಧ್ಯವೂ ಇಲ್ಲ ಹಾಗೆ ಆಗುವುದಿದ್ದರೆ ಜಿಲ್ಲಾಧಿಕಾರಿಗಳೇ ಆ ಕೆಲಸವನ್ನು ಮಾಡುತ್ತಿದ್ದರು ಹತ್ತು ವರ್ಷಗಳವರೆಗೆ ಕಾಯುವ ಅಗತ್ಯ ಇರ್ಲಿಲ್ಲ. ಸುಖಾ ಸುಮ್ಮನೆ ಯಾವುದೋ ಒಂದು ಉದ್ದೇಶ ಇಟ್ಟುಕೊಂಡು ಸಾರ್ವಜನಿಕರಿಗೆ ದಿಕ್ಕು ತಪ್ಪಿಸುವ ಕೆಲಸ ಮಾಡುವುದು, ಅನಗತ್ಯ ನಮ್ಮ ವ್ಯಕ್ತಿತ್ವ ಹರಣ ಮಾಡುವುದು ಸರಿಯಲ್ಲ ಮಾತನಾಡುವಾಗ ಹಿಡಿತ ಇರಬೇಕು, ನಮಗೆ ಯಾರ ಮೇಲೆಯೂ ದ್ವೇಷ ಇಲ್ಲ ಮುಂದೆ ಪಟ್ಟಣದ ಅಭಿವೃದ್ಧಿ ಕೆಲಸಗಳು ಇನ್ನೂ ಸಾಕಷ್ಟು ಇವೆ ಅವುಗಳನ್ನು ನಾವೆಲ್ಲರೂ ಕೂಡಿ ಮಾಡಬೇಕಾಗಿದೆ ಈ ರೀತಿಯ ಬೆಳವಣಿಗೆಯಿಂದ ಪಟ್ಟಣದ ಅಭಿವೃದ್ಧಿ ಕುಂಠಿತವಾಗುತ್ತದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಶಿವಾನಂದ ಹೂಗಾರ,ಡಾ.ನಜೀರ ಕೋಳ್ಯಾಳ, ಸಿದ್ದರಾಮಪ್ಪ ಚೌದ್ರಿ ಮೈಲೇಶ್ವರ, ಬಾಬು ಗೌಡ ಹಾವರಗಿ, ರಾಜು ಹಂಚಾಟೆ ಇದ್ದರು.

## ಎಸ್ಸಿ ಎಸ್ಟಿ ನೌಕರರ ಸಮನ್ವಯ ಸಮಿತಿಗೆ ರಾಮಲಿಂಗಪ್ಪ ನಾಯಕ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

ಮಾನ್ವಿ : ಪಟ್ಟಣದ ಸರಕಾರಿ ನೌಕರರ ಭವನದಲ್ಲಿ ನಡೆದ ಕರ್ನಾಟಕ ರಾಜ್ಯ ಸರಕಾರಿ ಎಸ್ಸಿ ಎಸ್ಟಿ ನೌಕರರ ಸಮನ್ವಯ ಸಮಿತಿ (ರಿ)ಮಾನ್ವಿ ನೂತನ ಪದಾಧಿಕಾ-ರಿಗಳ ಆಯ್ಕೆಯಲ್ಲಿ ತಾಲೂಕ ಘಟಕದ ನೂತನ ಅಧ್ಯಕ್ಷರಾಗಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಮಲಿಂಗಪ್ಪ ನಾಯಕ ಆಯ್ಕೆಯಾಗಿದ್ದಾರೆ. ಅದೇ ರೀತಿಯಾಗಿ ಗೌರವ ಅಧ್ಯಕ್ಷರಾಗಿ ನರಸಿಂಹ ಮತ್ತು ಕಾರ್ಯದರ್ಶಿಯಾಗಿ ಶ್ರೀನಿವಾಸ್ ಜಾಲ್ದಾರ್ ಆಯ್ಕೆಯಾಗಿದ್ದಾರೆ.ಮಾನ್ವಿ ತಾಲೂಕಿನ ನೌಕರರ ಸಂಘದ ಅಧ್ಯಕ್ಷರಾದ ಸುರೇಶ ಕುರ್ಡಿ, ಪ್ರಧಾನ ಕಾರ್ಯದರ್ಶಿಯಾದ ಹಂಪಣ್ಣ ಚಂಡೂರು, ಖಜಾಂಚಿಯಾದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಯಾದ ಭಾಗಯ್ಯ ನಾಯಕ, ಜಿಲ್ಲಾ ಸಂಘಟನ ಕಾರ್ಯದರ್ಶಿ ಯಾದ ತಿಮ್ಮೇಶ ನಾಯಕ, ಚಂದ್ರಶೇಖರ ಹೂಗಾರ, ಶಂಕರ್, ರಾಮು ಹೊಳೆಯಪ್ಪ , ಈರಣ್ಣ , ಗೋಪಾಲ ನಾಯಕ, ಮಲ್ಲಿಕಾರ್ಜುನ, ಶ್ರೀನಿವಾಸ ಇತರರು ಸೇರಿ ಆಯ್ಕೆ ಮಾಡಿದ್ದಕ್ಕಾಗಿ ರಾಮಲಿಂಗಪ್ಪ ನಾಯಕ ಅಭಿನಂದನೆಗಳು ತಿಳಿಸಿದ್ದಾರೆ. ನಂತರ ಮಾತನಾಡಿ ಕೊಟ್ಟಂತಹ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿಭಾಯಿಸಿಕೊಂಡು ಹೋಗುತ್ತೇನೆ ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಇತರರು ಉಪಸ್ಥಿತರಿದ್ದರು.



# ವಚನ ಸಾಹಿತ್ಯದ ರಕ್ಷಕ ಮಡಿವಾಳ ಮಾಚಿದೇವರು–ಕಿರಿಲಿಂಗ್ಪಪ

❑ ನೈಜ್ಯ ದೆಸೆ ನ್ಯೂಸ್

ಕವಿತಾಳ:'ಹನ್ನರಡನೇ ಶತಮಾನದ ಶರಣ-ರಲ್ಲಿ ಅತ್ಯಂತ ಕ್ರಾಂತಿಕಾರಿ ಶರಣರಾದ ಮಡಿವಾಳ ಮಾಚಿದೇವರು ಅವರನ್ನು ವಚನ ಸಾಹಿತ್ಯದ ರಕ್ಷಕರು ಎಂದು ಕಲರೆಯಲಾಗಿದೆ, ಅವರ ಕಾಯಕ ನಿಷ್ಠೆ, ಕ್ರಾಂತಿಕಾರಿ ಮನೋಭಾವನೆಯಿಂದ ಸಮಾಜದಲ್ಲಿನ ಓರೆಕೊರೆಗಳನ್ನು ತಿದ್ದುವಲ್ಲಿ ಮತ್ತು ವಚನ ಸಾಹಿತ್ಯಗಳ ರಕ್ಷಣೆ ಮಾಡುವಲ್ಲಿ ಮಹತ್ವದ ಪಾತ್ರ ವಹಿಸಿದ ಶರಣ-ರು ಇವರಾಗಿದ್ದರು' ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಕಿರಿಲಿಂಗಪ್ಪ ಕವಿತಾಳ ಹೇಳಿದರು.ಅವರು ಇಂದು ಪಟ್ಟಣ ಪಂಚಾಯತಿಯಲ್ಲಿ ಹಮ್ಮಕೊಂಡಿದ್ದ ಮಡಿವಾಳ ಮಾಚಿದೇವರ ಜಯಂತಿಲ್ಲಿ ಭಾಗವಹಿಸಿ ಮಾತನಾಡಿದರು.ರಾಜ ಬಿಜ್ಜಳನ ದುರಾಡಳಿದಿಂದ ಅಂದಿನ ಶರಣರ ಮೇಲೆನ ದೌರ್ಜನ್ಯವನ್ನು ತಡೆಗಟ್ಟುವಲ್ಲಿ ಮತ್ತು ಸಮಾಜದಲ್ಲಿ ಭಾವೈಕ್ಯತೆಯನ್ನು ಮೂಡಿಸುವಲ್ಲಿ ಕ್ರಾಂತಿಕಾರಿ ವಚನಗಳ ಮೂಲಕ ಮತ್ತು ತಮ್ಮ ಧೈರ್ಯದಿಂದ ವಚನ ಸಾಹಿತ್ಯಗಳನ್ನು ರಕ್ಷಣೆ ಂಆಡಿದ ಕೀರ್ತಿ ಇವ-ರಿಗೆ ಸಲ್ಲುತ್ತದೆ' ಎಂದರು.ಮಡಿವಾಳ ಮಾಚಿದೇವ ಸಮೀತಿಯ ತಾಲ್ಲೂಕ ಸದಸ್ಯ ದೇವರಾಜ ಮಡಿವಾಳ ಮಾತನಾಡಿ 'ಮಾಚಿದೇವರು ಅನುಭವ ಮಂಟಪದಲ್ಲಿ ಆಗಿನ ಕಾಲದಲ್ಲಿಯೇ ಕ್ರಾಂತಿಕಾರಿ ಮನೋಭಾವನೆಗಳನ್ನು ಹೊಂದಿದ ಶರಣರಾಗಿದ್ದು ಸಮಾಜದಲ್ಲಿನ ಅಂಕುಡೊಂಕುಗಳನ್ನು ಮತ್ತು ಸಮಾಜದಲ್ಲಿನ ಕೊಳೆಯನ್ನು ತೊಳೆಯುವ ಮೂಲಕ






ಸಮಾಜವನ್ನು ತಿದ್ದುವ ಕೆಲಸವನ್ನು ಮಾಡಿದ ಮಹಾನ್ ಶರಣರಲ್ಲಿ ಒಬ್ಬರು' ಎಂದರು.ದಲಿತ ಮುಖಂಡ ಯಾಕೂಬ್, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಮಲ್ಲಪ್ಪ ಬಸಾಪೂರ ಮಾತನಾಡಿದರು.ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿ ಸದ್ಯರಾದ ಮಲ್ಲಿಕಾರ್ಜುನಗೌಡ, ನಾಮನಿರ್ದೇಶನ ಸದ್ಯರಾದ ಅಯ್ಯಪ್ಪತೋಳ, ಅಯ್ಯಪ್ಪ ನಿಲೋಗಲ್, ಮೌನೇಶ ನಾಯಕ್ ದೊರೆ, ಮುಖಂಡರಾದ ತಿಪ್ಪಯ್ಯಸ್ವಮಿ, ಯಮನಪ್ಪ ದಿನ್ನಿ, ಕರಿಯಪ್ಪ ಅಡ್ಡೆ, ಕರಿಯಪ್ಪ ತೋಳ, ಯಲ್ಲಪ್ಪ ಮಾಡಗಿರಿ, ಹನುಮಂತ ಅರಕೇರಿ, ಈರಣ್ಣ ಕೆಳಗೇರಿ, ಮೌನೇಶ,ಚಾಂದಪಾಷಾ ಹಾಗೂ ಮಡಿವಾಳ ಸಮಾಜದ ಮುಖಂಡರಾದ ಸಣ್ಣಕ-ರಿಯಪ್ಪ, ಯಮನೂರಪ್ಪ, ವೆಂಕಟೇಶ್ ಫೋಟೋ ಸ್ಟುಡಿಯೋ, ಶೇಖರಪ್ಪ, ಉಮೇಶ್, ಅಮರೇಶ, ವೀರೇಶ, ರಮೆಶ, ಅಮರೇಶ, ವೆಂಕಟೇಶ್, ಶಿವಕುಮಾರ, ಪ್ರದೀಪಕುಮಾರ, ನಾಗರಾಜ, ಮಾಚಿದೇವ, ಆಂಜಿನೆಯ್ಯ, ಯಮನೂರ ಸೇ-ರಿದಂತೆ ಇನ್ನಿತರರು ಉಪಸ್ಥಿತರಿದ್ದರು.ನಂತರ ಮಡಿವಾಳ ಸಮಾಜದ ವತಿಯಿಂದ ನೂತನ ಪಟ್ಟಣಪಂಚಾಯತಿ ಅಧ್ಯಕ್ಷರ ಪರವಾಗಿ ಅವರ ಪತಿ ತಿಪ್ಪಯ್ಯಸ್ವಾಮಿ ಮತ್ತು ಉಪಾದ್ಯಕ್ಷರ ಪತಿ ಓವಣ್ಣ ಕಡತಲ್, ನಾಮನಿರ್ದೇಶಿತ ಸದಸ್ಯರಾದ ಅಯ್ಯಪ್ಪ ನಿಲೋಗಲ್, ಮೌನೇಶ ನಾಯಕ್ ದೊರೆ, ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಯಮನಪ್ಪ ದಿನ್ನಿ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.

# ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಡಾ.ಪ್ರಭುಗೌಡ ಅಭಿಮತ : ಸಮಾಜದ ಸರ್ವಾಂಗೀಣ ಪ್ರಗತಿ ಶಿಕ್ಷಣದಿಂದಲೇ ಸಾಧ್ಯ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಯಾವುದೇ ಒಂದು ಸಮಾಜ ಸರ್ವಾಂಗೀಣ ಪ್ರಗತಿಯನ್ನು ಕಾಣಬೇಕಾದರೆ ಆ ಸಮಾಜದ ಜನರು ಶಿಕ್ಷಣವಂತರಾಗಿರುವುದು ಅತ್ಯವಶ್ಯಕವಾಗಿದೆ ಎಂದು ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಪ್ರಭುಗೌಡ ಲಿಂಗದಳ್ಳಿ ಹೇಳಿದರು. ರವಿವಾರ ಪಟ್ಟಣದ ಶ್ರೀ ಖಾಸ್ಗತೇಶ್ವರ ಸಭಾಭವನದಲ್ಲಿ ಅಖಿಲ ಕರ್ನಾಟಕ ವೀರಶೈವ ಲಿಂಗಾಯತ ಹಂಡೇ ವಜೀರ ಸಮಾಜ ವಿಜಯಪುರ ಹಾಗೂ ತಾಳಿಕೋಟೆ ತಾಲೂಕ ಘಟಕವು ಹಮ್ಮಿಕೊಂಡ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು. ಹಂಡೇ ವಜೀರ ನಿಷ್ಠೆ ಹಾಗೂ ಪ್ರಾಮಾಣಿಕತೆಗೆ ಹೆಸರುವಾಸಿಯಾದ ಸಮಾಜವಾಗಿದ್ದು ಸಮಾಜದ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹಿಸಲು ಇಂತಹ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ ಕಾರ್ಯವಾಗಿದೆ. ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಶಿಕ್ಷಣ ಸಂಸ್ಥೆಗಳನ್ನೂ ಆರಂಭಿಸಬೇಕು ಎಂದರು. ಸಮಾರಂಭ ಉದ್ಘಾಟಿಸಿ ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಆರ್ ಎಸ್ ಪಾಟೀಲ ಕೂಚಬಾಳ ಮಾತನಾಡಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಭಾರತದ ಭವ್ಯ ಸಂಸ್ಕೃತಿ ಹಾಗೂ ಸಂಸ್ಕಾರಗಳನ್ನು ಕಲಿಸಿಕೊಡಬೇಕು ಮಕ್ಕಳು ಸಮಾಜದ ಭವಿಷ್ಯ ವಾಗಿದ್ದಾರೆ ಅವರ ಕುರಿತು ಹೆಚ್ಚಿನ ಕಾಳಜಿ ಪಾಲಕರು ವಹಿಸಬೇಕು. ಹಂಡೇವಜೀರ ಸಮಾಜ ಎಲ್ಲರೊಂದಿಗೆ ಬೆರೆಯುವ ಸಮಾಜವಾಗಿದೆ ಸಮಾಜದ ಐಕ್ಯತೆಗೆ ಇಂಥಹ ಕಾರ್ಯಕ್ರಮಗಳು ಪೂರಕವಾಗುತ್ತವೆ ಎಂದರು. ಕಲಬುರ್ಗಿ ಯುವ ಸಂಶೋಧಕ ಡಾ.ಡಿ.ಎನ್. ಪಾಟೀಲ, ಡಾ.ಎಂ ಎಂ ಬೆಳಗಲ್, ಜಯಶ್ರೀ ದೇವಿ ರಾಜುಗೌಡ ಪಾಟೀಲ ಮಾತನಾಡಿದರು. ಅಧ್ಯಕ್ಷತೆ ವಹಿಸಿದ ಹಂಡೇ ವಜೀರ ಸಮಾಜದ ರಾಜ್ಯಾಧ್ಯಕ್ಷ ಡಾ.ಎಸ್.ಎಸ್.ಪಾಟೀಲ ಸಮಾಜವನ್ನು ಸಂಘಟಿಸಲು ಹಲವಾರು ಕಾರ್ಯಕ್ರಮಗಳು ಹಮ್ಮಿಕೊಳ್ಳುತ್ತಿದ್ದೇವೆ ಈ ರೀತಿಯ ಪ್ರತಿಭಾ ಪುರಸ್ಕಾರ ಹಾಗೂ ಸಾಧಕ-ರಿಗೆ ಸನ್ಮಾನ ಕಾರ್ಯಕ್ರಮಗಳ ಮೂಲಕ ಸಮಾಜದ ಪ್ರತಿಭಾವಂತರನ್ನು ಗುರುತಿಸುವ ಕಾರ್ಯಕ್ರಮ ಮಾಡುತ್ತಿದ್ದೇವೆ ಸಮಾಜದ ಏಳಿಗಾಗಿ



ಇನ್ನು ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದೇವೆ ಇದಕ್ಕೆ ನಿಮ್ಮೆಲ್ಲರ ಸಹಕಾರ ಅಗತ್ಯವಾಗಿದೆ ಎಂದರು. ಹಿರೂರ ಅನ್ನದಾನೇಶ್ವರ ಹಿರೇಮಠದ ಪೂಜ್ಯ ಜಯ ಗುರು ಸಿದ್ದೇಶ್ವರ ಮಹಾ ಸ್ವಾಮೀಜಿ, ಕ-ರಿಭಂಟನಾಳದ ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮೀಜಿ ಹಾಗೂ ಕಲ್ಕೇರಿಯ ಗುರು ಮಡಿವಾಳೇಶ್ವರ ಶಿವಾಚಾರ್ಯರು ಸಾನಿಧ್ಯವಹಿಸಿ ಆಶೀರ್ವಚನ ನೀಡಿದರು. ಇದೇ ಸಂದರ್ಭದಲ್ಲಿ 2024 25ನೇ ವರ್ಷದ ಎಸ್ ಎಸ್ ಎಲ್ ಸಿ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಹಾಗೂ ಉನ್ನತ ವ್ಯಾಸಂಗ ಮಾಡುತ್ತಿರುವ ಸಮಾಜದ ಎಂಬಿಬಿಎಸ್ ಹಾಗೂ ಎಮ್.ಡಿ. ವಿದ್ಯಾರ್ಥಿಗಳನ್ನು ಹಾಗೂ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು ಹಾಗೂ ಸಮಾಜದ ವತಿಯಿಂದ ಹೊರ ತಂದಿರುವ 2026ರ ನೂತನ ಕ್ಯಾಲೆಂಡರನ್ನು ಬಿಡುಗಡೆಗೊಳಿಸಲಾಯಿತು. ಈ ಸಮಯದಲ್ಲಿ ತಾಲೂಕ ಘಟಕದ ಅಧ್ಯಕ್ಷ ರಾಮನಗೌಡ ಸಂ. ಬಿರಾದಾರ(ಕರಭಂಟನಾಳ), ಸೋಮನಗೌಡ ಪಾಟೀಲ(ನಡಹಳ್ಳಿ), ಜಿಎನ್ ಪಾಟೀಲ, ಎಚ್.ಎಸ್.ಪಾಟೀಲ, ರಾಜ್ಯ ಪ್ರಧಾನ ಕಾರ್ಯದರ್ಶಿ ಆರ್ ಎಸ್ ಪಾಟೀಲ (ಅಗಸಬಾಳ), ಜಿಲ್ಲಾ ಅಧ್ಯಕ್ಷ ಸಂಗನ ಗೌಡ ಕರಬಂಟನಾಳ, ಬಾಗಲಕೋಟ ಅಧ್ಯಕ್ಷ ವಿ.ಕೆ.ಪಾಟೀಲ,ಡಾ.ವಿ.ಎಸ್.ಕಾರ್ಚಿ,ಕಸಾಪ ಅಧ್ಯಕ್ಷ ಆರ್.ಎಲ್. ಕೊಪ್ಪದ, ಗೌರವಾಧ್ಯಕ್ಷ ಎಸ್.ಆರ್.ದೇಸಾಯಿ ಗೌಡ್ರು, ಮುತ್ತು ಬಿರಾದಾರ(ಚಬನೂರ), ಬಿಎಸ್ ಪಾಟೀಲ ಎಸ್ ಜಿ ಪಾಟೀಲ, ಆರ್ ಬಿ ಮ್ಯಾಗೇರಿ, ಶಂಕರಗೌಡ ರಾಯಗೊಂಡ,ಬಾಪುಗೌಡ ಬಿರಾದಾರ,-ಎಸ್.ಜಿ.ಬಳವಾಟ, ಸಂಗನಗೌಡ ಪಾಟೀಲ,ಕೆ.ಎಸ್.ಗೌಡರ,-ಎಂ.ಬಿ.ಬಿರಾದಾರ, ಸಿದ್ದನಗೌಡ ಪಾಟೀಲ, ರಾಜಶೇಖರ ಪಾಟೀಲ,-ಎಸ್ ಎಸ್ ಅವರಾದಿ, ಸಮಾಜದ ಹಿರಿಯರು ಗಣ್ಯರು ಇದ್ದರು.



## ಸಾಹಿತ್ಯ ಸಿಂಚನ

ಭಾವಾಂತರಂಗ.!

ಭಾವಿಸಿದ್ದೆಲ್ಲವು ಆಗುವುದಿಲ್ಲ ಅಕ್ಷರಶಃ ಕವಿತೆ
ಅಭಿವ್ಯಕ್ತವಾಗದು ಸಂಪೂರ್ಣ ಭಾವದೊರತೆ
ಬರದದ್ದೆಲ್ಲವೂ ಆಗದು ಪರಿಪೂರ್ಣ ಕಾವ್ಯ
ಅದೆಂದು ಬರಹಾತೀತ ಭಾವಾತೀತ ಭಾಷ್ಯ.!

ಸ್ಪಂದನೆಯ ಸ್ವರವೋ ಚಿಂತನೆಯ ಕರವೋ
ಮೆಲ್ಲ ಮೀಟುವುದು ಕವಿಯೆದೆ ಜೀವತಂತಿ
ಹೊಮ್ಮಿದರು ಸಹಸ್ರಾರು ನಾದಗಳು ಒಳಗೆ
ಕೆಲವಷ್ಟೆ ನಿನಾದವಾಗಿ ಕೇಳುವುದು ಹೊರಗೆ.!

ಹಾಳೆಯಲಿ ಧುಮ್ಮಿಕ್ಕಿ ಹರಿದದ್ದು ಅದೆಷ್ಟೋ?
ಎದೆಯೊಳಗೇ ಉಳಿದು ಬಿಕ್ಕಿದ್ದು ಮತ್ತೆಷ್ಟೋ.?
ಭಾವಸಾಗರದಿ ಭೋರ್ಗರೆವ ಸ್ವರದಲೆಗಳೆಲ್ಲ
ಪದವಾಗಿ ಪದ್ಯವಾಗಿ ಎಂದು ಮೊರೆವುದಿಲ್ಲ.!

ಮಸ್ತಕದಿ ಮೂಡಿದ ಚಿಂತನೆ ಕಲ್ಪನೆಗಳೆಂದು
ಪುಸ್ತಕದಿ ಇಡಿಯಾಗಿಳಿದು ಮಿನುಗದೆಂದೆಂದು
ಸಾವಿರದ ಸಾವಿರ ಸಂವೇದನೆಗಳು ಮಿಡಿದು
ಕಡೆಗೆ ಅಕ್ಷರವಾಗದೆ ಬಿಡುವವು ಒಳಗುಳಿದು.!

ಕವಿಯ ಒಡಲೊಳಗೆ ಕಟ್ಟಿದ ಗರ್ಭಗಳೆಲ್ಲವು
ಕವನ ಕವಿತೆ ಕಾವ್ಯವಾಗಿ ಜೀವ ತಳೆಯವು
ಹೆರಿಗೆಗಿಂತ ಗರ್ಭಾಪಾತವಾದದ್ದೇ ಹೆಚ್ಚೆಚ್ಚು
ಅಭಿವ್ಯಕ್ತವಾದದ್ದಕ್ಕಿಂತ ಅವ್ಯಕ್ತವಾದದ್ದೇ ಹೆಚ್ಚು.!

ಪ್ರತಿ ಬಾರಿ ಬರೆದು ಬಯಲಾಗಿಸಿದ್ದಕ್ಕಿಂತಲು
ಕವಿಯೆದೆ ಬಸಿದು ಕೊಟ್ಟ ಭಾವವೇ ಅಧಿಕ
ಹಚ್ಚಿದ ಆ ಅಕ್ಷರ ಪ್ರಣತೆ ಬೆಳಗಿದ್ದಕ್ಕಿಂತಲೂ
ಅವನೆದೆಯೊಳಗೆ ಹೊಮ್ಮಿದ ಬೆಳಕೇ ಅಧಿಕ.!

ಕವಿಗಿದು ಶಾಪವೂ ಹೌದು ವರವೂ ಹೌದು
ಹಾಗಾಗಿ ಖಾಲಿಯಾಗದೆ ಉಳಿದಿದೆ ಹೃದಯ
ಚಿಮ್ಮದ ಸ್ಪಂದನೆಗಳೆಲ್ಲ ಹೊರಗುಕ್ಕದೆ ಉಳಿದು
ಕಾವ್ಯಸೃಷ್ಟಿಗೆ ಚೈತನ್ಯ ನೀಡುತ್ತಲೇ ಇದೆ ನಿತ್ಯ.!

ಎ.ಎನ್.ರಮೇಶ್. ಗುಬ್ಬಿ.

# ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026 ರ ಕವಿಗೋಷ್ಟಿಗೆ ಕವಿ ಸುರೇಶ ಬಳಗಾನೂರು ಆಯ್ಕೆ

ನೈಜ್ಯ ದೆಸೆ ನ್ಯೂಸ್

ಬಳಗಾನೂರು,ಫೆ,1:– ದಿನಾಂಕ 5:2:2026 ರ ಬೆಳಿಗ್ಗೆ 9–00 ಗಂಟೆಯಿಂದ ಮದ್ಯಾಹ್ನ 1:30 ರ ವರೆಗೆ ಜಿಲ್ಲಾ ಕಾರಾಗೃಹ ರಾಯಚೂರು ಹತ್ತಿರ, ರಾಯಚೂರು ತಾಲೂಕು ತಹಸೀಲ್ದಾರ ಕಚೇರಿ ರಸ್ತೆಯ ನಗರದ ಮಹಿಳಾ ಸಮಾಜ ಆವರಣದಲ್ಲಿ ನಡೆಯುವ ಕವಿಗೋಷ್ಠಿ–01 ರಲ್ಲಿ ಮಸ್ಕಿ ತಾಲೂಕಿನ ಕವಿ,ವರದಿಗಾರ,ಉಪನ್ಯಾಸಕ ಸುರೇಶ ಬಳಗಾನೂರು ಆಯ್ಕೆಯಾಗಿದ್ದಾರೆ.ಈ



ಕಾರ್ಯಕ್ರಮದ ಉದ್ಘಾಟಕರಾಗಿ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವ ರಂಗಣ್ಣ ಪಾಟೀಲ್,ಅಳ್ಳುಂಡಿ ಆಗಮಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಲಿಂಗಸುಗೂ–ರಿನ ಸಾಹಿತಿಗಳಾಗಿರುವ ಗಿರಿರಾಜ ಹೊಸಮನಿ ವಹಿಸಲಿದ್ದಾರೆ.ಮುಖ್ಯ ಅತಿಥಿಗಳಾಗಿ ರಾಯಚೂರು ಜಿಲ್ಲಾ ಅಪರ ಜಿಲ್ಲಾಧಿಕಾರಿಗಳಾಗಿರುವ ಶಿವಾನಂದ,ರಾಯಚೂರು ಜಿಲ್ಲಾ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿರುವ ಈರಣ್ಣ ಬಿರಾದಾರ, ಸಾಹಿತಿಗಳಾಗಿರುವ ಬಿ.ಜಿ.ಹುಲಿ, ರಾಯಚೂರು ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವ ಡಾಕ್ಟರ್,ಬಿ.ವಿಜಯ ರಾಜೇಂದ್ರ, ಸಿಂಧನೂರು ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವ ಹೆಚ್,–ಎಫ್ ಮಸ್ಕಿ ಆಗಮಿಸಲಿದ್ದಾರೆ. ರಾವುತ್ ರಾವ್ ಬರೂರ್ ಈ ಕವಿಗೋಷ್ಟಿಗೆ ಸ್ವಾಗತಿಸಲಿದ್ದಾರೆ ನಿರೂಪಣೆಯನ್ನು ಅಣ್ಣಪ್ಪ ಮೇಟಿಗೌಡ ಮಾಡಲಿದ್ದಾರೆ,ವಿಜಯಲಕ್ಷ್ಮೀ ಅಸ್ಕಿಹಾಳ ವಂದಿಸಲಿದ್ದಾರೆ.ನಿರ್ವಹಣೆ ನಾಗಪ್ಪ ಹೊರಪ್ಯಾಟಿ ಕಾರ್ಯಕ್ರಮದ ನಿರ್ವಹಣೆ ಮಾಡಲಿದ್ದಾರೆ.

# ಕಾಕತೀಯ ಶಿಕ್ಷಣ ಸಂಸ್ಥೆಯ 30 ನೇ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಕಾಕತೀಯ ಶಿಕ್ಷಣ ಸಂಸ್ಥೆಯ ಕಾಕತೀಯ ಶಾಲಾ ಆವರಣದಲ್ಲಿ ನಡೆದ 30 ನೇ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಉದ್ಘಾಟಿಸಿ ಮಾತನಾಡಿ ಕಾಕತೀಯ ಶಿಕ್ಷಣ ಸಂಸ್ಥೆಯು ಈ ಭಾಗದ ವಿದ್ಯಾರ್ಥಿಗಳಿಗೆ ಅಂಗ್ಲ ಮಾಧ್ಯಮವನ್ನು ಪರಿಚಯಿಸಿ ಕಳೆದ 30 ವರ್ಷಗಳಿಂದ ಗುಣಮಟ್ಟದ ಶಿಕ್ಷಣವನ್ನು ನೀಡುತ್ತ ಬಂದಿದೆ. ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಪಠ್ಯದ ಜೊತೆಗೆ ಅತ್ಮಸ್ಥೈವನ್ನು,ಧೈರ್ಯವ'ನ್ನು,ಜೀವನದಲ್ಲಿ ಮುನ್ನಡೆಯಬೇಕೆನ್ನುವ ಅತ್ಮವಿಶ್ವಾವಸವನ್ನು ಮೂಡಿಸುವ ಕಾರ್ಯವನ್ನು ಮಾಡಬೇಕಾಗಿದೆ ಎಂದು



ತಿಳಿಸಿದರು.ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ನೀಡಿಗೌರವಿಸಲಾಯಿತು. ಉತ್ತಮ ಪಾಲಕರಿಗೆ ಸಾನ್ಮನ ಮಾಡಲಾಯಿತು. ಪ್ರಾಥಮಿಕ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. 10 ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ 624 ಅಂಕಗಳನ್ನು ಪಡೆದ ವರ್ಷ ಮೇಟಿ ರವರಿಗೆ ಬಂಗಾರದ ಪದಕ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಹಿರಿಯ ನ್ಯಾಯಾಧೀಶರಾದ ಶಿವರಾಜ ವಿ.ಸಿದ್ದೇಶ್ವರ, ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ, ತಾ. ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರಾದ ರಾಜಾ ಸುಭಾಷಚಂದ್ರನಾಯಕ, ಡಾ.ಸ್ನೇಹಲತಾಬೆಟ್ಟದೂರು, ಕಾಕತೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಗೊಡವರ್ತಿ ಸತ್ಯನಾರಾಯಣ, ಉಪಾಧ್ಯಕ್ಷರಾದ ಮನ್ನೆಉ–ದಯ್ ಭಾಸ್ಕರ್ ರಾವ್, ಕಾರ್ಯದರ್ಶಿ ಗೊಡವರ್ತಿ ಶ್ರೀನಿವಾಸರಾವು, ಚದಲವಾಡ ಸುಬ್ಬರಾವ್, ತಾಳ್ಳೂರಿ ರಾಮಕೃಷ್ಣ, ಜಾಲಾದಿ ಪ್ರಭಾಕರ, ವೇಮೂರಿ ನಾಗೇಶ್ವರರಾವ್, ಬೊಪ್ಪನ ಪಣೇಂದ್ರಕುಮಾರ, ವೇಗುಳ್ಳ ಸುರೇಶ, ಕೊಡವಟಿ ಶ್ರೀನಿವಾಸ, ಚಿಲಕೂರಿ ಪ್ರಸಾದ್ ರಾವ್, ಶಾಲೆಯ ಮುಖ್ಯಗುರು ವೀರಭದ್ರಗೌಡ. ಕೆ, ಮುಖಂಡರಾದ ಎಸ್.ಸುಬ್ರಮಣ್ಯಂ, ಸೇರಿದಂತೆ ಇನ್ನಿತರರು ಇದ್ದರು.

## ತುಂಗಭದ್ರ ಜಲಾಶಯಕ್ಕೆ ಶಾಸಕ ಹಂಪನಗೌಡ ಬಾದರ್ಲಿ ಭೇಟಿ ಕಾಮಗಾರಿ ಪರಿಶೀಲನೆ

ನೈಜ್ಯ ದೆಸೆ ನ್ಯೂಸ್

ರೈತರ ಜೀವನಾಡಿಯಾದ ತುಂಗಭದ್ರ ಜಲಾಶಯಕ್ಕೆ ಇಂದು ರೈತಪರ ಚಿಂತಕ ಹಾಗೂ ನೆಚ್ಚಿನ ಶಾಸಕರಾದ ಹಂಪನಗೌಡ ಬಾದರ್ಲಿ ಅವರು ಭೇಟಿ ನೀಡಿ, ಜಲಾಶಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಗೇಟ್ ಕಾಮಗಾರಿಯನ್ನು ಸ್ಥಳದಲ್ಲೇ ವೀಕ್ಷಿಸಿದರು.ಜಲಾಶಯದ ಸುರಕ್ಷತೆ, ನೀರಿನ ಸಮರ್ಪಕ ನಿರ್ವಹಣೆ ಹಾಗೂ ರೈತರ ಹಿತದೃಷ್ಟಿಯಿಂದ ನಡೆಯುತ್ತಿರುವ ಈ ಕಾಮಗಾರಿ ಅತ್ಯಂತ ಮಹತ್ವದ್ದಾಗಿದ್ದು, ಕಾಮಗಾರಿಯ ಪ್ರಗತಿ, ತಾಂತ್ರಿಕ ಅಂಶಗಳು ಹಾಗೂ ಪೂರ್ಣಗೊಳ್ಳುವ ಅವಧಿ ಕುರಿತು ಶಾಸಕರು ಸಂಬಂಧಪಟ್ಟ ಅಧಿಕಾರಿಗಳಿಂದ ವಿವರವಾದ ಮಾಹಿತಿ ಪಡೆದರು. ಕಾಮಗಾರಿಯಲ್ಲಿ ಯಾವುದೇ ಲೋಪದೋಷಗಳಿಲ್ಲದೆ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಿ, ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದರು.ಈ ಸಂದರ್ಭದಲ್ಲಿ ರೈತ ಮುಖಂಡರು ಹಾಗೂ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ಬಸವರಾಜ ಹಿರೇಗೌಡ್ರು, ರೈತ ಮುಖಂಡರಾದ ಸಣ್ಣ ಬಿಮನಗೌಡ್ರು ಸೇರಿದಂತೆ ಅನೇಕ ರೈತ ಮುಖಂಡರು ಉಪಸ್ಥಿತರಿದ್ದು, ಜಲಾಶಯಕ್ಕೆ ಸಂಬಂಧಿಸಿದ ರೈತರ ಸಮಸ್ಯೆಗಳು, ನೀರು ಬಿಡುಗಡೆ ವೇಳಾಪಟ್ಟಿ ಹಾಗೂ ಭವಿಷ್ಯದಲ್ಲಿನ ನೀರಿನ ಭದ್ರತೆ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಶಾಸಕರು ರೈತರ ಮಾತುಗಳನ್ನು ಆಲಿಸಿ, ಅವರ ಹಿತಸಾಧನೆಗೆ ಸದಾ ಬದ್ಧನಾಗಿರುವುದಾಗಿ ಭರವಸೆ ನೀಡಿದರು.ತುಂಗಭದ್ರ ಜಲಾಶಯ ಈ ಭಾಗದ ಕೃಷಿಗೆ ಜೀವಾಳವಾಗಿದ್ದು, ಇದರ ಸಮರ್ಪಕ ನಿರ್ವಹಣೆ ಮೂಲಕ ರೈತರ ಬದುಕು ಸುಧಾರಿಸಲು ಸರ್ಕಾರ ಅಗತ್ಯ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಶಾಸಕರು ಹೇಳಿದರು.



# ಧಾರ್ಮಿಕ ಸೇವಕರ ದಿನ ಹಬ್ಬದ ಅಂಗವಾಗಿ ಸನ್ಮಾನ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

ಸಿಂಧನೂರು, ಫೆಬ್ರವರಿ 2: ಕತೋಲಿಕ್ ಚರ್ಚ್‌ನಿಂದ ಪ್ರತಿವರ್ಷ ಆಚರಿಸಲಾಗುವ ಧಾರ್ಮಿಕ ಸೇವಕರ ದಿನ (ಅರ್ಪಿತ ಜೀವನ ದಿನ) ಇಂದು ಭಕ್ತಿಭಾವದಿಂದ ಆಚರಿಸಲಾಯಿತು. ಇದೇ ದಿನ ಪ್ರಭುವಿನ ಸಮರ್ಪಣೆ ಹಬ್ಬ (ಕ್ಯಾಂಡಲ್‌ಮಾಸ್) ಕೂಡ ಆಚರಿಸಲಾಗುತ್ತದೆ.ಈ ದಿನದ ಮಹತ್ವವು ದೇವರಿಗೆ ಸಂಪೂರ್ಣವಾಗಿ ತಮ್ಮ ಜೀವನವನ್ನು ಅರ್ಪಿಸಿಕೊಂಡು ಸಮಾಜದ ಸೇವೆಯಲ್ಲಿ ನಿರತರಾಗಿರುವ ಯಾಜಕರು, ಧಾರ್ಮಿಕ ಸಹೋದರಿಯರು (ಸಿಸ್ಟರ್‌ಗಳು), ಧಾರ್ಮಿಕ ಸಹೋದರರು (ಬ್ರದರ್‌ಗಳು) ಹಾಗೂ ವಿವಿಧ ಧಾರ್ಮಿಕ ಸಂಘಟನೆಗಳ ಸದಸ್ಯರ ಸೇವೆ, ತ್ಯಾಗ ಮತ್ತು ನಿಷ್ಠೆಯನ್ನು ಗೌರವಿಸುವುದಾಗಿದೆ. ಜೊತೆಗೆ ಹೊಸ ಧಾರ್ಮಿಕ ವೃತ್ತಿಗಳಿಗೆ ಪ್ರಾರ್ಥಿಸುವ ಉದ್ದೇಶವೂ ಈ ದಿನದ ವಿಶೇಷತೆಯಾಗಿದೆ.ಈ ದಿನದ ಪ್ರಯುಕ್ತವಾಗಿ ಹೋಲಿ ಫ್ಯಾಮಿಲಿ ಚರ್ಚ್ನಲ್ಲಿ ಬಲಿ




ಕ್ರಿಸ್ತ ಯೇಸುವಿನ ಸೇವೆಯಲ್ಲಿ ತಮ್ಮ ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಾ, ಸೇವೆಯಲ್ಲಿ ಕ್ರಿಸ್ತನನ್ನು ಕಾಣುತ್ತಾ, ಧಾರ್ಮಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡುತ್ತಿರುವ ಕನ್ಯಾ ಸ್ತ್ರೀಯರನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು.ಈ ಸನ್ಮಾನ ಕಾರ್ಯಕ್ರಮದಲ್ಲಿ ಹೋಲಿ ಫ್ಯಾಮಿಲಿ ಚರ್ಚಿನ ಪುಟಾಣಿ ಮಕ್ಕಳು ಕನ್ಯಾ ಸ್ತ್ರೀಯ–ರಿಗೆ ಶಾಲು ಹೊದಿಸಿ, ಹಾರ ಹಾಕಿ ಶುಭಾಶಯಗಳನ್ನು ಕೋರುವ ಮೂಲಕ ಕಾರ್ಯಕ್ರಮಕ್ಕೆ ವಿಶೇಷ ಅರ್ಥವನ್ನು ನೀಡಿದರು.ಕಾರ್ಯಕ್ರಮದಲ್ಲಿ ಹೋಲಿ ಫ್ಯಾಮಿಲಿ ಚರ್ಚಿನ ವಿಚಾರಣೆ ಗುರುಗಳು ಹಾಗೂ ಸಿಂಧನೂರು ವಲಯದ ಶ್ರೇಷ್ಠ ಗುರುಗಳಾದ ಫಾದರ್ ಜ್ಞಾನಪ್ರಕಾಶ್,ಹೋಲಿ ಫ್ಯಾಮಿಲಿ ಚರ್ಚಿನ ಭಕ್ತಾದಿಗಳು ಹಾಗೂ ಪುಟಾಣಿ ಮಕ್ಕಳು ಉಪಸ್ಥಿತರಿದ್ದು, ಕಾರ್ಯಕ್ರಮಕ್ಕೆ ಶೋಭೆ ತಂದರು. ಈ ಸಂದರ್ಭದಲ್ಲಿಂದು ಧಾರ್ಮಿಕ ಸೇವಕರ ಸೇವೆಯು ನಿಷ್ಠೆಯ ಪ್ರತೀಕವಾಗಿದ್ದು, ಅವರ ಜೀವನವು ಸಮಾಜಕ್ಕೆ ಪ್ರೇರಣೆಯಾಗಿದೆ ಎಂಬ ಸಂದೇಶವನ್ನು ನೀಡಲಾಯಿತು.

# ಕರ್ನಾಟಕದ ಶ್ರೀಶೈಲ ಖ್ಯಾತಿಯ ಮಸ್ಕಿ ಮಲ್ಲಿಕಾರ್ಜುನ ರಥೋತ್ಸವ

ನೈಜ್ಯ ದೆಸೆ ನ್ಯೂಸ್

ಮಸ್ಕಿ ಎರಡನೇ ಶ್ರೀಶೈಲ ಎಂದೇ ಪ್ರಸಿದ್ಧಿ ಪಡೆದಿರುವ ಈ ಭಾಗದ ಧಾರ್ಮಿಕ ಕೇಂದ್ರಗಳಲ್ಲಿ ಒಂದಾದ ಐತಿಹಾಸಿಕ ಮಲ್ಲಿಕಾರ್ಜುನ ಸ್ವಾಮಿಯ ಮಹಾರಥೋತ್ಸವವು ರವಿವಾರ ಭಕ್ತರ ಜಯ ಘೋಷಗಳೊಂದಿಗೆ ವಿಜೃಂಭಣೆಯಿಂದ ನಡೆಯಿತು. ನಂತರ ಪಾಟೀಲ್ ನ್ಯೂಸ್ ಅಲರ್ಟ್ ಸುದ್ದಿಯೊಂದಿಗೆ ದೇವಸ್ಥಾನದ ಅರ್ಚಕರಾದ ವಿಶ್ವನಾಥ ಸೊಪ್ಪಿಮಠ ಮಾತನಾಡಿದರು,ಬೆಳಿಗ್ಗೆ ದೇವಸ್ಥಾನದಲ್ಲಿಮಲ್ಲಿಕಾರ್ಜುನ ಲಿಂಗಕ್ಕೆ ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ನಡೆದವು. ನಂತರ ರಥ–'ೋತ್ಸವದ ಕಳಸ ಪ್ರತಿಷ್ಠಾಪನೆ ನಡೆಯಿತು.ಸಂಜೆ ಐದು ಗಂಟೆಗೆ ಮಲ್ಲಿಕಾರ್ಜುನನ ಉತ್ಸವ ಮೂರ್ತಿ ಹೊತ್ತ ಪಲ್ಲಕ್ಕಿಯನ್ನು ರಥದ ಸುತ್ತ ಐದು ಬಾರಿ ಪ್ರದಕ್ಷಿಣೆ ಹಾಕಿಸಿದ ನಂತರ ಪಲ್ಲಕ್ಕಿಯಲ್ಲಿನ ಉತ್ಸವ ಮೂರ್ತಿಯನ್ನು ಭಕ್ತರ ಜಯಘೋಷಗಳನಡುವೆ ಮೇಲೆ ಪ್ರತಿಷ್ಠಾಪಿಸಲಾಯಿತು.ಮಸ್ಕಿಯ ಗಚ್ಚಿನ ಹಿರೇಮಠದ ವರರುದ್ರಮುನಿ ಶಿವಾಚಾರ್ಯರಮಹಾ ಸ್ವಾಮಿಗಳು ರಥ–'ಕ್ಕೆ ಧಾರ್ಮಿಕ ವಿಧಿ–ವಿಧಾನಗಳಂತೆ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ವಿಧ್ಯುಕ್ತವಾಗಿ ಚಾಲನೆ ನೀಡಿದರು.ಭಕ್ತರು ಉತ್ತುತ್ತಿ ಬಾಳೆ ಹಣ್ಣು ಎಸೆದು ಭಕ್ತಿ ಸಮರ್ಪಿಸಿದರು.ಭೋವಿ ಸಮಾಜದ



ಅನೇಕ ಯುವಕರು ದಿನ ಉಪವಾಸ ಹಾಗೂ ಮಡಿವಂತಿಕೆಯಿಂದ ತೇರಿನ ಕೆಳಗೆ ಇದ್ದು ರಥ–'ಕ್ಕೆ ಸೊನ್ನೆ ಹಾಕುವ ಮೂಲಕ ರಥೋತ್ಸವದ ಯಶಸ್ವಿಗೆ ಕಾರಣರಾದರುಈ ವೇಳೆ ಶಾಸಕ ಹಾಗೂ ಖಾದಿ ಗ್ರಾಮೋದ್ಯೋಗ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಆರ್ ಬಸನಗೌಡ ತುರುವಿಹಾಳ, ಮಾಜಿ ಶಾಸಕ ಪ್ರತಾಪ್ ಗೌಡ ಪಾಟೀಲ್, ಹಿರಿಯ ಮುಖಂಡರಾದ ಮಾದೇವಪ್ಪ ಗೌಡ ಪೊಲೀಸ್ ಪಾಟೀಲ್, ಮಲ್ಲಿಕಾರ್ಜುನ ದೇವಸ್ಥಾನದ ಅರ್ಚಕರಾದ, ವಿಶ್ವನಾಥ ಸೊಪ್ಪಿಮಠ, ಸಿದ್ದಯ್ಯ ಹೆಸರೂರು ಹಿರೇಮಠ, ಸೇರಿದಂತೆ ಊರಿನ ಪ್ರಮುಖ ಮುಖಂಡರು ಹಾಗೂ ಭಕ್ತರು ಇದ್ದರೂ. ಹಾಗೆ ಸೂಕ್ತ ಬಂದೋಬಸ್ತ್ ವ್ಯವಸ್ಥೆಯನ್ನು ಮಸ್ಕಿ ಸರ್ಕಲ್ ಇನ್ಸೆಕ್ಟರ್ ರವರ ನೇತೃತ್ವದಲ್ಲಿ ಒದಗಿಸಲಾಗಿತ್ತು.

# ಬೃಹತ್ ಹಿಂದೂ ಶೋಭಾಯಾತ್ರೆ ಕಲ್ಮಠದ ಶ್ರೀ ವಿರೂಪಾಕ್ಷ ಪಂಡೀತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳಿಂದ ಉದ್ಘಾಟನೆ

ನೈಜ್ಯ ದೆಸೆ ನ್ಯೂಸ್

ಮಾನ್ವಿ : ಪಟ್ಟಣದ ಶ್ರೀ ಉದ್ಬವ ಆಂಜನೇಯ ಸ್ವಾಮಿ ದೇವಸ್ಥಾನ ಅವರಣದಲ್ಲಿ ಮಾನ್ವಿ ಹಿಂದೂ ಸಮ್ಮೇಳನ ಸಮಿತಿ ವತಿಯಿಂದ ಆಯೋಜಿಸಲಾದ ಬೃಹತ್ ಹಿಂದೂ ಶೋಭಾಯಾತ್ರೆಗೆ ಶ್ರೀ ವಿರೂಪಾಕ್ಷ ಪಂಡೀತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಅವರು ಚಾಲನೆ ನೀಡಿ ಆಶೀರ್ವಚನ ನೀಡಿದರು. ಹಿಂದೂ ಸಂಸ್ಕೃತಿ, ಪರಂಪರೆ ಮತ್ತು ಧಾರ್ಮಿಕ ಐಕ್ಯತೆಯ ಪ್ರತೀಕವಾಗಿ ಈ ಶೋಭಾಯಾತ್ರೆ ಅತ್ಯಂತ ವೈಭವದಿಂದ ನಡೆಯಿತು.ಶ್ರೀ ಉದ್ಬವ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಪ್ರಾರಂಭವಾದ ಶೋಭಾಯಾತ್ರೆ ಛತ್ರಪತಿ ಶಿವಾಜಿ ವೃತ್ತ, ಮಹರ್ಷಿ ವಾಲ್ಮೀಕಿ ವೃತ್ತ ಹಾಗೂ ಬಸವ ವೃತ್ತ ಮಾರ್ಗವಾಗಿ ಟಿಎಪಿಸಿಎಂಸಿ ಆವರಣ ತಲುಪಿತು. ಯಾತ್ರೆಯಲ್ಲಿ ಚಂಡಿ ವಾದ್ಯ, ನೀರಮಾನ್ವಿ ಡೊಳ್ಳುಕುಣಿತ, ಕೋಲಾಟ, ನಂದಿ ಕೋಲು ಕುಣಿತ, ಮರಗೋಲು ಮತ್ತು ಹಗಲುವೇಷ ಕಲಾತಂಡಗಳು ಸೇರಿದಂತೆ ವಿವಿಧ ಜನಪದ ಕಲಾತಂಡಗಳು ಭಾಗವಹಿಸಿ ಸಂಭ್ರಮ ಹೆಚ್ಚಿಸಿದರು.ಕಾರ್ಯಕ್ರಮದಲ್ಲಿ ಕರೆಗುಡ್ಡ ಶ್ರೀ ಮಹಾಂತೇಶ್ವರ ಮಠದ ಶ್ರೀ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಚೀಕಲಪರ್ವಿ ಮಠದ ಶ್ರೀ ಸದಾಶಿವ ಮಹಾಸ್ವಾಮಿಗಳು, ಅಮರೇಶ್ವರ ಮಠದ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳು, ಬಾಗಲವಾಡ ಶಿವಯ್ಯಸ್ವಾಮಿಗಳು, ಸುವರ್ಣಗಿರಿ ಮಠದ ಶಂಕರಯ್ಯಸ್ವಾಮಿಗಳು, ಮಾಜಿ ಸಂಸದ ಬಿ.ವಿ. ನಾಯಕ, ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಾಟ ಹಾಗೂ ಗಂಗಾಧರನಾಯಕ, ಭಾರತೀಯ ಜನತಾ ಪಕ್ಷದ ಮಾನ್ವಿ ಮಂಡಲ ಅಧ್ಯಕ್ಷ ವೀರಭದ್ರಗೌಡ ಭೋಗವತಿ, ಶರಣೆಗೌಡ ನಕ್ಕುಂದಿ, ಮಾನ್ವಿ ಹಿಂದೂ ಸಮ್ಮೇಳನ ಸಮಿತಿ ಅಧ್ಯಕ್ಷ ನೀಲಕಂಠಪ್ಪ, ಶ್ರೀ ನಗರೇಶ್ವರ ಆರ್ಯವೈಶ್ಯ ಮಂಡಳಿಯ ತಾಲೂಕು ಅಧ್ಯಕ್ಷ ಆರ್. ಮುತ್ತುರಾಜ್ ಶೆಟ್ಟಿ, ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಹರಿಹರಪಾಟೀಲ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.ಇದೇ ಸಂದರ್ಭದಲ್ಲಿ ಮಾನ್ವಿ ಪಟ್ಟಣ ಹಾಗೂ ತಾಲೂಕಿನ ವಿವಿಧ ಗ್ರಾಮಗಳಿಂದ ಸಾವಿರಾರು ಯುವಕರು ಶೋಭಾ ಯಾತ್ರೆಯಲ್ಲಿ ಭಾಗವಹಿಸಿ ಧಾರ್ಮಿಕ ಉತ್ಸಾಹ ವ್ಯಕ್ತಪಡಿಸಿದರು.



## ನೇಮಕಾತಿ ಪ್ರಕಟಣೆ

**ಭಾರತ ಅಂಚೆ ಜಿಡಿಎಸ್ ನೇಮಕಾತಿ 2026: 30,000ಕ್ಕೂ ಹೆಚ್ಚು ಹುದ್ದೆಗಳಿಗೆ ಆನ್‌ಲೈನ್ ಅರ್ಜಿ ಭಾರತ ಅಂಚೆ ಇಲಾಖೆಯು ಗ್ರಾಮೀಣ ಡಾಕ್ ಸೇವಕ್ (ಉಆಖ) ನೇಮಕಾತಿ 2026 ಅಡಿಯಲ್ಲಿ 30,000ಕ್ಕೂ ಹೆಚ್ಚು ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಈ ನೇಮಕಾತಿಯಲ್ಲಿ ದೇಶದ 23 ಅಂಚೆ ವಲಯಗಳಲ್ಲಿ ಗ್ರಾಮೀಣ ಡಾಕ್ ಸೇವಕ್ (GDS), ಶಾಖಾ ಅಂಚೆಮಾಸ್ಟರ್ (BPM) ಹಾಗೂ ಸಹಾಯಕ ಶಾಖಾ ಅಂಚೆಮಾಸ್ಟರ್ (೦ಃಕಃ) ಹುದ್ದೆಗಳು ಒಳಗೊಂಡಿವೆ.ಆನ್‌ಲೈನ್ ನೋಂದಣಿ ಪ್ರಕ್ರಿಯೆ 30 ಜನವರಿ 2026ರಿಂದ ಆರಂಭವಾಗಿದೆ. ಅರ್ಹ ಅಭ್ಯರ್ಥಿಗಳು ಅಧಿಕೃತ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು:https://indiapost.gov.in/gdsonlineengagementಅರ್ಹತಾ ಮಾನದಂಡಗಳು:ಶೈಕ್ಷಣಿಕ ಅರ್ಹತೆ: 10ನೇ ತರಗತಿ ಪಾಸ್ ವಯೋಮಿತಿ: 18 ರಿಂದ 40 ವರ್ಷಗಳು ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳು ನಿಗದಿತ ಅವಧಿಯೊಳಗೆ ಭಾರತ ಅಂಚೆ ಜಿಡಿಎಸ್ ಅಧಿಕೃತ ಪೋರ್ಟಲ್‌ಗೆ ಭೇಟಿ ನೀಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಂತೆ ಸೂಚಿಸಲಾಗಿದೆ.ಕೊನೆಯ ದಿನಾಂಕ : 16 ಫೆಬ್ರವರಿ 2026**

## ಸಮಾನತೆ, ಶ್ರಮದ ಸಂದೇಶ ಸಾರಿದ ಮಡಿವಾಳ ಮಾಚಿದೇವರ ಜಯಂತಿ ಬಳಗಾನೂರಿನಲ್ಲಿ ಆಚರಣೆ

■ ನೈಜ್ಯ ದೆಸೆ ನ್ಯೂಸ್

ಬಳಗಾನೂರು: ಬಳಗಾನೂರಿನ ಪಟ್ಟಣ ಪಂಚಾಯತ್ ಕಾರ್ಯಾಲಯದಲ್ಲಿ ಭಕ್ತಿಭಾವದಿಂದ ಮಡಿವಾಳ ಮಾಚಿದೇವರ ಜಯಂತಿಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಮಡಿವಾಳ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಗೌರವ ನಮನ ಸಲ್ಲಿಸಲಾಯಿತು.ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು, ಪಂಚಾಯತ್ ಅಧಿಕಾರಿಗಳು ಹಾಗೂ ಊರಿನ ಮುಖಂಡರು ಉಪಸ್ಥಿತರಿದ್ದರು. ಮಾತನಾಡಿದ ಗಣ್ಯರು ಮಡಿವಾಳ ಮಾಚಿದೇವರು ಸಮಾಜಕ್ಕೆ ನೀಡಿದ ಸೇವೆ, ಶ್ರಮ ಹಾಗೂ ಸಮಾನತೆಯ ಸಂದೇಶಗಳು ಇಂದಿನ ಪೀಳಿಗೆಗೆ ಪ್ರೇರಣೆಯಾಗಬೇಕು ಎಂದು ಹೇಳಿದರು.






## ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಬೋಸರಾಜು ಅವರಿಂದ ಶ್ರೀ ಗಳಿಗೆ ಪುಷ್ಪನಮನ

■ ನೈಜ್ಯ ದೆಸೆ ನ್ಯೂಸ್

ತಿಂತಿಣಿ: ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ತಿಂಥ-ಣಿ ಬ್ರಿಜ್ ಶಾಖಾ ಮಠಕ್ಕೆ ಆಗಮಿಸಿ ಬ್ರಹ್ಮಲೀನರಾದ ಪರಮಪೂಜ್ಯ ಶ್ರೀ ಸಿದ್ದರಾಮಾನಂದಪುರಿ ಸ್ವಾಮೀಜಿಯವರ ಗದ್ದುಗೆಗೆ ಪುಷ್ಪನಮನ ಸಲ್ಲಿಸಿ ನುಡಿನಮನದ ವೇದಿಕೆಗೆ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರೊಂದಿಗೆ ಆಗಮಿಸಿದ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಶ್ರೀ ಎನ್ ಎಸ್ ಬೋಸುರಾಜು ಜೀ ಅವರು. ಕಾಗಿನೆಲೆ ಮಹಾಸಂಸ್ಥಾನ ಕನಕಗುರುಪೀಠದ ಜಗದ್ಗುರು ಶ್ರೀ ಶ್ರೀ ನಿರಂಜನಾನಂದಪುರಿ ಸ್ವಾಮೀಜಿಯವರ ದಿವ್ಯ ಸಾನಿದ್ಯದಲ್ಲಿ ನಡೆಯುತ್ತಿರುವ ನುಡಿ ನಮನ ಕಾರ್ಯಕ್ರಮ ಮತ್ತು ಪುಣ್ಯಾರಾಧನೆಯಲ್ಲಿ ಸಚಿವರುಗಳಾದ ಶರಣಪ್ರಕಾಶ್ ಪಾಟೀಲ್, ಶಿವರಾಜ್ ತಂಗಡಗಿ, ಮಾಜಿ ಸಚಿವರಾದ ಬಂಡೆಪ್ಪ ಕಾಂಶೆಂಪುರ್, ಶಾಸಕರಾದ ಭೀಮ್ ಸೇನ್ ಚಿಮ್ಮನಕಟ್ಟಿ ಹಾಗೂ ಹಲವಾರು ಶಾಸಕರು, ಮುಖಂಡರುಗಳು ಮತ್ತು ಸ್ವಾಮೀಜಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



# ಮಾನ್ವಿ ತಹಶೀಲ್ದಾರ್ ಕಚೇರಿಯಲ್ಲಿ ಶ್ರೀ ಮಡಿವಾಳ ಮಾಚಿದೇವ ಜಯಂತಿ ಆಚರಣೆ

❑ ನೈಜ್ಯ ದೆಸೆ ನ್ಯೂಸ್

ಮಾನ್ವಿ : ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ತಾಲೂಕು ಆಡಳಿತ ಹಾಗೂ ತಾಲೂಕು ಮಡಿವಾಳ ಸಮಾಜದ ಸಂಯುಕ್ತಾಶ್ರಯದಲ್ಲಿ ಶ್ರೀ ಮಡಿವಾಳ ಮಾಚಿದೇವ ಜಯಂತಿಯನ್ನು ಭಕ್ತಿಭಾವದಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಉಪತಹಶೀಲ್ದಾರ್ ವಿನಾಯಕರಾವ್ ಅವರು ಶ್ರೀ ಮಡಿವಾಳ ಮಾಚಿದೇವರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿ, 12ನೇ ಶತಮಾನದಲ್ಲಿ ಬಸವಾದಿ ಶರಣರಲ್ಲಿ ಮಡಿವಾಳ ಮಾಚಿದೇವರು ಪ್ರಮುಖ ಶರಣರಾಗಿದ್ದು, ಅನುಭವ ಮಂಟಪದಲ್ಲಿ ಶರಣರು ರಚಿಸಿದ ಅಮೂಲ್ಯ ವಚನಗಳ ಸಂರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು ಎಂದು ತಿಳಿಸಿದರು.ತಾ. ಮಡಿವಾಳ ಸಮಾಜದ ಗೌರವಾಧ್ಯಕ್ಷ ಎಂ. ನಾಗರಾಜ ಅವರು ಮಾತನಾಡಿ, 12ನೇ ಶತಮಾನದಲ್ಲಿ ತಮ್ಮ ಕಾಯಕದ ಶ್ರೇಷ್ಠತೆಯಿಂದ ಮಡಿವಾಳ



ಮಾಚಿದೇವರು ಖ್ಯಾತಿ ಪಡೆದರು. ಅವರ ತತ್ವ ಆದರ್ಶಗಳನ್ನು ಸಮಾಜದವರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮಡಿವಾಳ ಸಮಾಜವು ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಹಿಂದುಳಿದಿರುವುದಕ್ಕೆ ಸಂಘಟನೆಯ ಕೊರತೆಯೇ ಪ್ರಮುಖ ಕಾರಣವಾಗಿದೆ. ತಾಲೂಕಿನಲ್ಲಿ ಮಡಿವಾಳ ಮಾಚಿದೇವರ ಮೂರ್ತಿ ಪ್ರತಿಷ್ಠಾಪನೆ ಹಾಗೂ ಸಮುದಾಯ ಭವನ ನಿರ್ಮಾಣ ಅಗತ್ಯವಿದ್ದು, ಸಮಾಜದವರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಮಡಿವಾಳ ಸಮಾಜದ ತಾಲೂಕು ಅಧ್ಯಕ್ಷ ಅಶೋಕ ಮಡಿವಾಳ, ಕಾರ್ಯದರ್ಶಿ ಹುಲಿಗೆಪ್ಪ ಅರೋಲಿ, ಮಾಜಿ ಅಧ್ಯಕ್ಷ ಯಲ್ಲಪ್ಪ, ಕಾರ್ಯಾಧ್ಯಕ್ಷ ಬಸವರಾಜ ಬ್ಯಾಗವಾಟ, ಖಜಾಂಚಿ ರಮೇಶ, ಸದಸ್ಯರಾದ ನಗೇಶ ಕಬೇರ, ನರಸರೆಡ್ಡಿ, ನಿಂಗಪ್ಪ, ಹನುಮೇಶ, ಚಂದ್ರನಾಯಕ, ಬಾಬುಲ್, ಉರುಕುಂದಪ್ಪ, ಈರಣ್ಣ, ನಾಗರಾಜ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಂಚಾರ ನಿಯಮ ಪಾಲನೆಗೆ ನ್ಯಾಯಾಧೀಶರ ಕರೆ ಚಾಲಕರಿಗೆ ಜಾಗೃತಿ ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ

❑ ನೈಜ್ಯ ದೆಸೆ ನ್ಯೂಸ್

ಮಾನ್ವಿ : ಪಟ್ಟಣದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಘಟಕದ ಆವರಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕು ನ್ಯಾಯವಾದಿಗಳ ಸಂಘ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಸೇರಿದಂತೆ ವಿವಿಧ ಇಲಾಖೆಗಳ ಸಂಂ-ಯುಕ್ತಾಶ್ರಯದಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತೆ ಮಾಸದ ಅಂಗವಾಗಿ ಕಾನೂನು ಅರಿವು ಹಾಗೂ ನೆರವು ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮವನ್ನು ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಆನಂದ ಹೆಚ್ ಕೊಣ್ಣೂರು ಉದ್ಘಾಟಿಸಿ ಮಾತನಾಡಿ, ಸಂಚಾರ ನಿಯಮಗಳು ಸುಗಮ ಸಂಚಾರ ಮತ್ತು ಅಮೂಲ್ಯ ಜೀವ ರಕ್ಷಣೆಗಾಗಿ ರೂಪಿಸಲ್ಪಟ್ಟಿವೆ ಎಂದು ತಿಳಿಸಿದರು. ರಸ್ತೆ ನಿಯಮಗಳನ್ನು ಪಾಲಿಸುವುದರಿಂದ ಸುರಕ್ಷಿತ ಪ್ರಯಾಣ ಸಾಧ್ಯವಾಗುತ್ತದೆ. ಅತಿವೇಗದಲ್ಲಿ ವಾಹನ ಚಾಲನೆ ಮಾಡಬಾರದು, ವಾಹನಗಳಿಗೆ ವಿಮೆ ಮಾಡಿಸಿರಬೇಕು. ದ್ವಿಚಕ್ರ ವಾಹನದಾರರು ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸುವುದರಿಂದ ಅಪಘಾತದಲ್ಲಿ ತೀವ್ರ ಗಾಯಗಳು ಹಾಗೂ ಸಾವು ಸಂಭವಿಸಿದ ಅನೇಕ ಘಟನೆಗಳು ಕಂಡುಬರುತ್ತಿವೆ.



ನಮ್ಮನ್ನು ನಂಬಿರುವ ಕುಟುಂಬದವರಿಗಾಗಿ ರಸ್ತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಹೇಳಿದರು.ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಘಟಕದ ವ್ಯವಸ್ಥಾಪಕರಾದ ನಾಗರಾಜ ಮಾತನಾಡಿ, ಚಾಲಕರು ಅಪಘಾತಗಳನ್ನು ತಪ್ಪಿಸಲು ನಿಯಮಿತ ಹಾಗೂ ಜವಾಬ್ದಾರಿಯುತ ಚಾಲನೆ ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಓವರ್‌ಟೇಕ್, ಅತಿವೇಗದ ಚಾಲನೆ ಅಪಾಯಕಾರಿ ಎಂದು ಎಚ್ಚರಿಸಿದರು. ಚಾಲಕರು ಸಮಯಕ್ಕಿಂತ ಮೊದಲು ಘಟಕಕ್ಕೆ ಆಗಮಿಸಿ ವಾಹನದ ಸ್ಥಿತಿಯನ್ನು ಪರಿಶೀಲಿಸಬೇಕು. ತಮ್ಮ ಬಸ್ಸಿನಲ್ಲಿ ಶಾಲಾ ಮಕ್ಕಳು, ವೃದ್ಧರು, ಮಹಿಳೆಯರು ಸೇರಿದಂತೆ ಅನೇಕರು ಸಂಚಾರಿಸುವುದರಿಂದ ಅವರ ಸುರಕ್ಷತೆಗೆ ಹೆಚ್ಚಿನ ಆದ-್ಯತೆ ನೀಡಬೇಕು ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಮಾನ್ವಿ ಪೊಲೀಸ್ ಠಾಣೆಯ ಎ.ಎಸ್.ಐ. ಹನುಮೇಶ, ಸಹಾಯಕ ಸರ್ಕಾರಿ ಅಭಿಯೋಜಕರಾದ ಅರ್ಚನಾ ಯಾದವ್, ವಕೀಲರ ಸಂಘದ ಅಧ್ಯಕ್ಷ ರವಿಕುಮಾರ ಪಾಟೀಲ್, ಪ್ರ.ಕಾರ್ಯದರ್ಶಿ ಯಲ್ಲಪ್ಪ ಬಾದರದಿನ್ನಿ, ದತ್ತಾತ್ರೇಯ ಹಿರೆಕೋಟ್ನೆಕಲ್, ಚನ್ನಬಸವ ನಾಯಕ ಸೇರಿದಂತೆ ಸಾರಿಗೆ ಘಟಕದ ಚಾಲಕರು, ನಿರ್ವಹಕರು ಹಾಗೂ ತಾಂತ್ರಿಕ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ರಾಯಚೂರು ಉತ್ಸವದ ಜ್ಯೋತಿ ರಥಯಾತ್ರೆಗೆ ವಿದ್ಯುಕ್ತ ಚಾಲನೆ

■ ನೈಜ್ಯ ದೆಸೆ ನ್ಯೂಸ್

ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026ರ ಅಂಗವಾಗಿ ಜಿಲ್ಲಾಡಳಿತ ರೂಪಿಸಿರುವ ಜ್ಯೋತಿ ರಥಯಾತ್ರೆಗೆ ಫೆಬ್ರವರಿ 01ರಂದು ಚಾಲನೆ ಸಿಕ್ಕಿತು.ನಗರದ ಐತಿಹಾಸಿಕ ಕರ್ನಾಟಕ ಸಂಘದ ಆವರಣದಿಂದ ರಥಯಾತ್ರೆ ಆರಂಭಗೊಂಡಿತು.ರಥಯಾತ್ರೆ ಚಾಲನೆ ಹಿನ್ನೆಲೆಯಲ್ಲಿ ಕರ್ನಾಟಕ ಸಂಘದ ಆವರಣದಲ್ಲಿ ಬೆಳಗ್ಗೆ ಹಬ್ಬದ ಸಂಭ್ರಮ ಕಂಡು ಬಂದಿತು. ಹೂವು, ತಳಿರು ತೋರಣಗಳಿಂದ ಶೃಂಗರಿಸಿದ್ದ ರಥವು ಗಮನ ಸೆಳೆಯಿತು. ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಒಂದೇ ಬಣ್ಣದ ಸೀರೆ ಧರಿಸಿ ಆಗಮಿಸಿ ಕಾರ್ಯಕ್ರಮದ ಕಳೆ ಹೆಚ್ಚಿಸಿದರು.ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಮ್ಮಿಕೊಂಡಿದ್ದ ರಥಯಾತ್ರೆಗೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಚಾಲನೆ ನೀಡಿದರು.ಜಿಲ್ಲಾಡಳಿತದ ಸೂಚನೆ ಹಿನ್ನೆಲೆ, ರಜೆ ದಿನವಾದ ಭಾನುವಾರವೂ ಬೇರೆ ಬೇರೆ ಇಲಾಖೆಗಳಅಧಿಕಾರಿಗಳು ತಮ್ಮತಮ್ಮ ಕಚೇರಿಯ ಸಿಬ್ಬಂದಿಯೊಂದಿಗೆ ಆಗಮಿಸಿದ್ದರು.ಜ್ಯೋತಿ ರಥಯಾತ್ರೆ ಕಾರ್ಯಕ್ರಮದಲ್ಲಿ ಶಾಲಾ-ಕಾಲೇಜಿನ ವಿದ್ಯಾರ್ಥಿ,ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರಥಯಾತ್ರೆಯನ್ನು ಯಶಸ್ವಿಗೊಳಿಸಿದರು.ನಗರದ ಪ್ರಮುಖ ರಸ್ತೆಗಳಲ್ಲಿ ಜಾಥಾ: ನಗರದ ಬಂಗಾರ ಬಜಾರ್, ಸದರ್ ಬಜಾರ್, ಹಳೆ ನಗರಸಭೆ ಕಚೇರಿ ಮುಂಭಾಗ, ಕೇಂದ್ರ ಬಸ್ ನಿಲ್ದಾಣ,ಅಂಬೇಡ್ಕರ್ ವೃತ್ತ ಮಾರ್ಗವಾಗಿ ಬಸವೇಶ್ವರ ವೃತ್ತದ ಮೂಲಕ ಮಾನವಿಯತ್ತ ಹೊರಟಿತು.ಈ ಜ್ಯೋತಿ ರಥಯಾತ್ರೆಯು ಮಾನವಿ, ಸಿಂಧನೂರ, ಮಸ್ಕಿ ಲಿಂಗಸೂರು, ಕವಿತಾಳ, ದೇವದುರ್ಗ, ಗಬ್ಬೂರು, ಅರಕೇರಾ, ಸಿರವಾರ ಸೇರಿದಂತೆ ಫೆ5ರವರೆಗೆ ಜಿಲ್ಲೆಯಾದ್ಯಂತ ಬೇರೆ ಕಡೆಗಳಲ್ಲಿ ಸಂಚರಿಸಲಿದೆ. ಇದೇ ಸಂದರ್ಭದಲ್ಲಿ ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅಪರ ಜಿಲ್ಲಾಧಿಕಾರಿ ಶಿವಾನಂದ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಕೃಷ್ಣ ಶಾವಂತಗೇರಿ, ಉಪ ಆಯುಕ್ತರಾದ ಸಂತೋಷ ರಾಣಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಕೃಷಿ ಇಲಾಖೆ ಜಂಟಿ ನಿರ್ದೇಶಕರಾದ ಜಯಪ್ರಕಾಶ್ ಚವ್ಹಾಣ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಸಿಂಧು ಆರ್. ಸೇರಿದಂತೆ ಮತ್ತು ರಾಯಚೂರು ತಾಲೂಕು ಮಟ್ಟದ ಅಧಿಕಾ-ರಿಗಳು ಮತ್ತು ಸಿಬ್ಬಂದಿ ಇದ್ದರು.ಮುಖಂಡರಾದ ರವಿ ಬೋಸರಾಜು, ಜಯವಂತರಾವ್ ಪತಂಗೆ, ಕಿಶಾಂತಪ್ಪ ರವಿ ಜಲ್ದಾರ್ ಸೇರಿದಂತೆ ವಿವಿಧ ದಿನಾಚರಣೆಗಳ ಆಚರಣಾ ಸಮಿತಿಯ ಸದಸ್ಯರು ಕೂಡ ಹಾಜರಿದ್ದರು.





# ಜಿಲ್ಲಾಡಳಿತದ ವತಿಯಿಂದ ಶ್ರೀ ಮಡಿವಾಳ ಮಾಡಿದೇವ ಜಯಂತಿ ಆಚರಣೆ ಮಡಿವಾಳ ಮಾಚಿದೇವರ ಮಾರ್ಗದಲ್ಲಿ ನಡೆಯರಿ: ಪರಮೇಶ್ವರ ಸಾಲಿಮಠ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು ಫೆಬ್ರವರಿ 01 (ಕರ್ನಾಟಕ ವಾರ್ತೆ): ಸಮ ಸಮಾಜ ನಿರ್ಮಾಣಕ್ಕೆ ಬಸವಣ್ಣನವರು ತೋರಿದ ಹಾದಿಯಲ್ಲಿ ಮಡಿವಾಳ ಮಾಚಿದೇವರು ನಡೆದು, ಎಲ್ಲ ಶರಣರ ವಚನ ಸಾಹಿತ್ಯವನ್ನು ಸಂರಕ್ಷಣೆ ಮಾಡಿದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ನಡೆಯಬೇಕೆಂದು ಸೀತಾ ಸುಬ್ಬರಾಜು ಸ್ಮಾರಕ ಮಹಾವಿದ್ಯಾಲಯದ ವಿಶ್ರಾಂತ ಪ್ರಾಚಾರ್ಯರಾದ ಪರಮೇಶ್ವರ ಸಾಲಿಮಠ ಅವರು ಹೇಳಿದರು.ಫೆ.01ರ ಭಾನುವಾರ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗನಗಮಂಡಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಇವರ ಸಂಂ-ಯುಕ್ತಾಶ್ರಯದಲ್ಲಿ ಶ್ರೀ ಮಡಿವಾಳ ಮಾಡಿದೇವ




ಜಯಂತಿ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಮಾತನಾಡಿದರು.ಸಾಮಾಜಿಕ ವ್ಯವಸ್ಥೆಯ ಕೆಳ ಸ್ಥರದಲ್ಲಿದ್ದ ಜಾತಿಗಳಿಗೆ ವಿದ್ಯೆ ಕಲಿಯಲು ಅವಕಾಶ ಇಲ್ಲದ ದಿನಗಳಲ್ಲಿ ಸಾಕಷ್ಟು ವಿಷಯಗಳನ್ನು ಅಧ್ಯಯನ ಮಾಡಿ ಪಾಂಡಿತ್ಯ ಗಳಿಸಿದ್ದವರು ವೀರ ಗಣಾಚಾರಿ ಮಡಿವಾಳ ಮಾಚಿದೇವರು. ಬಸವಣ್ಣನವರು ಮಾಚಿದೇವರನ್ನು ತಂದೆ ಎಂದು ಕರೆದಿದ್ದರು. ಇದು ಮಾಚಿದೇವರ ಮೇಲಿರುವ ಬಸವಣ್ಣನವರ ಗೌರವದ ಪ್ರತೀಕ ಎಂದು ಹೇಳಿದರು.ಮಡಿವಾಳ ಕುಲದಲ್ಲಿ ಹುಟ್ಟಿದ್ದರೂ ಮಾಚಯ್ಯ ಉತ್ತಮ ಶಿಕ್ಷಣ ಮತ್ತು ಶರಣ-ರ ಸಂಪರ್ಕದಿಂದ ಮಹಾಪುರುಷರಾದರು. ಕಲ್ಯಾಣ ಕ್ರಾಂತಿಯ ಇತಿಹಾಸದಲ್ಲಿ ಮಾಚಯ್ಯ ಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬರು. ಜ್ಞಾನಜ್ಯೋತಿಯಿಂದ ಲೋಕವನ್ನು ಬೆಳಗಿಸಿದ ಮಾಚಯ್ಯ ನುಡಿದಂತೆ ನಡೆದ, ನಡೆದಂತೆ ನುಡಿದ ಶರಣರಲ್ಲಿ ಒಬ್ಬರು. ಎಲ್ಲರೂ ಸಮಾನರು, ಎಲ್ಲರಿಗೂ ಸಮಾನ ಅಧಿಕಾರವಿದೆ ಎಂದು ತಿಳಿಸಿ ಸರ್ವರಿಗೂ ಆದ-್ಯಾತ್ಮಿಕ ಉನ್ನತಿ ಪಡೆಯುವಂತೆ ಪ್ರೋತ್ಸಾಹಿಸಿದರು.ಈ ವೇಳೆ ಸಮಾಜದ ಜಿಲ್ಲಾಧ್ಯಕ್ಷರಾದ ಜಂಬಣ್ಣ ಅವರು ಮಾತನಾಡಿ, ಜಾತಿ ಪದ್ಧತಿ ಹೋಗಲಾಡಿಸಲು ಅನೇಕ ಶರಣರು ಶ್ರಮಿಸಿದ್ದು, ಅವರಲ್ಲಿಮಡಿವಾಳ ಮಾಚಿದೇವ ಪ್ರಮುಖರಾಗಿದ್ದಾರೆ. ಅವರ ಆಚ-ಾರ ವಿಚಾರವನ್ನು ಸಮಾಜದವರು ಪ್ರತಿಯೊಬ್ಬರೂ ಪಾಲಿಸಬೇಕು ಎಂದರು.ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನದಲ್ಲಿ ಎಲ್ಲರಿಗೂ ಅವಕಾಶಗಳನ್ನು ನೀಡಲಾಗಿದ್ದು, ಅವುಗಳನ್ನು ಸರಿಯಾಗಿ ಬಳಸಿಕೊಳ್ಳುವ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು. ಸಮಾಜದ ಮಕ್ಕಳಿಗೆ ಹೆಚ್ಚಿನ ಮಟ್ಟದಲ್ಲಿ ಶಿಕ್ಷಣ ನೀಡಲು ಪೋಷಕರು ಆದ್ಯತೆ ನೀಡಬೇಕು. ಉನ್ನತ ಹುದ್ದೆಯಲ್ಲಿ ಸಮಾಜದವರು ಕಾರ್ಯನಿರ್ವಹಿಸುವ ಮೂಲಕ ಸಮಾಜದ ಏಳಿಗೆಗೆ ಶ್ರಮಿಸಬೇಕು ಎಂದು ಹೇಳಿದರು.ಮಡಿವಾಳ ಮಾಚಿದೇವ ಭಾವಚಿತ್ರ ಮೆರವಣಿಗೆ: ಕಾರ್ಯಕ್ರಮಕ್ಕೂ ಮೊದಲು ನಗರದ ಆರ್.ಟಿ.ಓ ಸರ್ಕಲ್ ಹತ್ತಿರುವರ ಮಡಿವಾಳ ಮಾಚಿದೇವ ಅವರ ಪುತ್ಥಳಿಗೆ ಸ್ವಾಮೀಜಿಗಳು ಸೇ-ರಿದಂತೆ ವಿವಿಧ ಗಣ್ಯರು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.ಈ ವೇಳೆ ಕಿಲ್ಲೇ ಬೃಹನ್ಮಠದ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿ, ಸೋಮವಾರಪೇಟೆ ಹಿರೇಮಠದ ಅಭಿನವ ರಾಚೋಟಿ ವೀರಶಿವಾಚಾರ್ಯ ಸ್ವಾಮಿ ಅವರ ಸಾನಿಧ್ಯದಲ್ಲಿ ಪೂಜೆ ಸಲ್ಲಿಸಲಾಯಿತು.ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಚಾಲನೆ ನೀಡಿದರು. ಈ ವೇಳೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ರಾಯಚೂರು ತಹಶೀಲ್ದಾರ್ ಸುರೇಶ ವರ್ಮ, ಮುಖಂಡರಾದ ರವಿ ಜಲ್ದಾರ್ ಸೇ-ರಿದಂತೆ ಸಮಾಜದ ಮುಖಂಡರು ಶಾಸಕ-ರಿಗೆ ಸಾಥ್ ನೀಡಿದರು.ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ತಹಶೀಲ್ದಾರ್ ಪರಶುರಾಮ್, ಕಂದಾಯ ಅಧಿಕಾರಿ ನರಸಿಂಹ ರೆಡ್ಡಿ, ಸಮಾಜದ ಮುಖಂಡರಾದ ಪಿ.ಶಿವಮೂರ್ತಿ, ಪಿ.ಮಲ್ಲೇಶ, ಎಂ.ಹುಸೇನ್, ನರಸಪ್ಪ, ವೆಂಕಟೇಶ, ಮುನಿಸ್ವಾನಿ, ಜಿ.ವೆಂಕಟೇಶ, ಜಮಾನ, ಈರಮ್ಮ, ದಂಡಪ್ಪ ಬಿರಾದಾರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಇದ್ದರು.



## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬ್ಯಾಚುಲರ್ ಆಫ್ ಫಿಶರೀಸ್ ಸೈನ್ಸ್

ಬ್ಯಾಚುಲರ್ ಆಫ್ ಫಿಶರೀಸ್ ಸೈನ್ಸ್ (B.F.Sc) ಒಂದು 4 ವರ್ಷಗಳ (8 ಸೆಮಿಸ್ಟರ್‌ಗಳು) ಪದವಿ ಕೋರ್ಸ್ ಆಗಿದ್ದು, ಮೀನು ಸಾಕಣೆ (Aquaculture), ಮೀನುಗಾರಿಕೆ ತಂತ್ರಜ್ಞಾನ, ಸಂಸ್ಕರಣೆ (Processing) ಮತ್ತು ನಿರ್ವಹಣೆಯ ಬಗ್ಗೆ ತರಬೇತಿ ನೀಡುತ್ತದೆ. 12ನೇ ತರಗತಿಯಲ್ಲಿ ವಿಜ್ಞಾನ **(PCB)** ಓದಿದವರು ಈ ಕೋರ್ಸ್ ಸೇರಬಹುದು, ಇದು ಉತ್ತಮ ಉದ್ಯೋಗಾವಕಾಶ ಮತ್ತು ಸ್ವಯಂ ಉದ್ಯೋಗವನ್ನು ಕಲ್ಪಿಸುತ್ತದೆ.ಃಈಖಥಿ ಕೋರ್ಸ್ ವಿವರಗಳು:ಅವಧಿ: 4 ವರ್ಷಗಳು (8 ಸೆಮಿಸ್ಟರ್‌ಗಳು). ಅರ್ಹತೆ: ಪಿಯುಸಿ (10+2) ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ **(PCB)** ವಿಷಯಗಳಲ್ಲಿ ಉತ್ತೀರ್ಣರಾಗಿರಬೇಕು.ಪ್ರವೇಶಾತಿ: ಐಸಿ-ಎಆರ್ **(ICAR)** ಅಖಿಲ ಭಾರತ ಪ್ರವೇಶ ಪರೀಕ್ಷೆ ಅಥವಾ ರಾಜ್ಯ ಕೃಷಿ/ಮೀನುಗಾರಿಕೆ ವಿಶ್ವವಿದ್ಯಾಲಯಗಳ ಪ್ರವೇಶ ಪರೀಕ್ಷೆಗಳ ಮೂಲಕ.ಕೋರ್ಸ್ ವಿಷಯಗಳು: ಜಲಚರ ಸಾಕಣೆ (Aquaculture), ಮೀನು ಜೈವಿಕ ತಂತ್ರಜ್ಞಾನ, ಮೀನು ಸಂಸ್ಕರಣೆ, ಮೀನುಗಾ-ರಿಕೆ ಅರ್ಥಶಾಸ್ತ್ರ, ಮತ್ತು ಸಮುದ್ರ ಜೈವಿಕ ಶಾಸ್ತ್ರ. ಉದ್ಯೋಗಾವಕಾಶಗಳು ಮತ್ತು ವೃತ್ತಿಜೀವನ: ಸರ್ಕಾರಿ ಕೆಲಸಗಳು: ಮೀನುಗಾರಿಕೆ ಇಲಾಖೆಯಲ್ಲಿ ಮೀನುಗಾ-ರಿಕೆ ಅಧಿಕಾರಿ (Fisheries Officer), ಸಹಾಯಕ ನಿರ್ದೇಶಕ, ಮತ್ತು ವಿಸ್ತರಣಾ ಅಧಿಕಾರಿ.ಖಾಸಗಿ ಕ್ಷೇತ್ರ: ಮೀನು ಸಾಕಣೆ ಕೇಂದ್ರಗಳ ಮ್ಯಾನೇಜರ್ (Farm/ Hatchery Manager), ಮೀನು ಸಂಸ್ಕರಣಾ ಘಟಕಗಳು, ಮತ್ತು ರಫ್ತು ಸಂಸ್ಥೆಗಳು.ಸ್ವಯಂ ಉದ್ಯೋಗ: ಮೀನು ಸಾಕಣೆ **(Aquaculture)**, ಮೀನು ಮ-ರಿಗಳ ಉತ್ಪಾದನೆ (Seed Production), ಮತ್ತು ಮೀನು ಮಾರಾಟ. ಕರ್ನಾಟಕದಲ್ಲಿ ಪ್ರಮುಖ ಸಂಸ್ಥೆ: ಮಂಗಳೂರಿನಲ್ಲಿರುವ ಕರ್ನಾಟಕ ಪಶುಸಂಗೋಪನೆ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (KVAFSU) ದಡಿ ಬರುವ ಮೀನುಗಾ-ರಿಕೆ ಮಹಾವಿದ್ಯಾಲಯವು ಪ್ರಮುಖ ಕೇಂದ್ರವಾಗಿದೆ.

## ದೇವರಾಜ್ ಭಂಡಾರಿಗೆ ಪಿ.ಎಚ್.ಡಿ ಪದವಿ

❑ ನೈಜ್ಯ ದೆಸೆ ನ್ಯೂಸ್

ಮಸ್ಕಿ : ಮಸ್ಕಿಯ ಕನ್ನಡ ಉಪನ್ಯಾಸಕ ದೇವರಾಜ್ ಭಂಡಾರಿ ಗುಲ್ಬರ್ಗ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ವಿಭಾಗದಿಂದ ಡಾ. ನಾಗಪ್ಪ ಟಿ ಯೋಗಿ ಇವರ ಮಾರ್ಗದರ್ಶನದಲ್ಲಿ ಕಾದಂಬರಿಗಳಲ್ಲಿ ಪ್ರಭುತ್ವ ಮತ್ತು ಪ್ರತಿರೋಧಕ ನೆಲೆಗಳು (ಹೈದರಾಬಾದ್ ಕರ್ನಾಟಕ)ಎಂಬ ಕನ್ನಡ ಭಾಷಾ ವಿಭಾಗದಲ್ಲಿ ಮಹಾ ಪ್ರಬಂಧವನ್ನು ಮಂಡಿಸಿದ್ದ ಹಿನ್ನೆಲೆಯಲ್ಲಿ ಜ 27 ರಂದು ಕಲ್ಬುರ್ಗಿ ವಿಶ್ವವಿದ್ಯಾಲಯವು ಪಿ ಎಚ್ ಡಿ ಪದವಿಯನ್ನು ಅಂಗೀಕರಿಸಿದೆ. ಮಾರ್ಚನಲ್ಲಿ ನಡೆಯುವ ವಿಶ್ವವಿದ್ಯಾಲಯದ ಘಟಿ-ಕೋತ್ಸವದಲ್ಲಿ ಪಿ ಎಚ್ ಡಿ ಪದವಿ ಪಡೆಯಲಿದ್ದಾರೆ. ಮಸ್ಕಿ ತಾಲೂಕಿನ ಕಾಲೇಜು ಉಪನ್ಯಾಸಕರು,ಶಿಕ್ಷಕರು,ಇವರ ಗೆಳೆಯರ ಬಳಗ ಮತ್ತು ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢ ಶಾಲೆ ಹಾಗೂ ಮುಖ್ಯ ಗುರುಗಳಾದ ಶ್ರೀ ಅಮರನಾಥ್ ಹಳ್ಳೂರ ಅವರು ಅಭಿನಂದಿಸಿದ್ದಾರೆ



## ನರ ಮತ್ತು ಚರ್ಮದ ಕಾಯಿಲೆಯಾದ ಕುಷ್ಠರೋಗದ ಸಂಪೂರ್ಣ ವಾಸಿಯಾಗುವ ಖಾಯಿಲೆ.

❑ ನೈಜ್ಯ ದೆಸೆ ನ್ಯೂಸ್

ನರ ಮತ್ತು ಚರ್ಮದ ಖಾಯಿಲೆಯಾಗಿರುವ ಹಾಗೂ ಶತ ಶತಮಾನಗಳಿಂದ ಇಂದಿಗೂ ಸಮುದಾಯದಲ್ಲಿರುವ ಕುಷ್ಠರೋಗವನ್ನು ನಿರ್ಮೂಲನೆ ಮಾಡಲು, ಯಾರಿಗಾದರೂ ದೇಹದ ಮೇಲೆ ಸ್ಪರ್ಶಜ್ಞಾನವಿಲ್ಲದ ತಿಳಿಬಿಳಿ ತಾಮ್ರವರ್ಣದ ಮಚ್ಚೆಗಳು ಇದ್ದಲ್ಲಿ, ಕೈಕಾಲುಗಳಲ್ಲಿ ಜೋಮು ಕಂಡು ಬಂದಲ್ಲಿ ಹತ್ತಿರದ ಸರಕಾರಿ ಆಸ್ಪತ್ರೆಯಲ್ಲಿ ತಪಾಸಣೆ ಮಾಡಿಸಿ ಖಚಿತಪಟ್ಟಲ್ಲಿ ಚಿನ್ಹೆಗಳ ಆಧಾರದ ಮೇಲೆ 6 ತಿಂಗಳಿನಿಂದ ಒಂದು ವರ್ಷದ ಅವಧಿಯ ಉಚಿತ ಚಿಕಿತ್ಸೆ ಪಡೆದು ಸಂಪೂರ್ಣ ಗುಣಮುಖರಾಗಲು ಮಹಾತ್ಮಾ ಗಾಂಧೀಜಿಯವರ ಕನಸು ನನಸು ಮಾಡಲು ನಾವೆಲ್ಲರೂ ಜಾಗೃತಿ ನೀಡೋಣವೆಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿ, ಸ್ಪರ್ಶ್ ಕುಷ್ಠರೋಗ ಜಾಗೃತಿ ಆಂದೋಲನದಡಿ ರಾಯಚೂರು ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಡಾ ಈರಣ್ಣ ಕೋಸಗಿ ರವರ ನೇತೃತ್ವದಲ್ಲಿ ನಗರದ ಸ್ಟೇಶನ್ ರಸ್ತೆಯಲ್ಲಿರುವ ಬಾಲಕಿಯರ ಸರಕಾರಿ ಪ್ರೌಢಶಾಲೆ ಪ್ರತಿಜ್ಞೆ ಸ್ವೀಕರಿಸಲಾಯಿತು. ಈ ಸಂದರ್ಭದಲ್ಲಿ ರಾಗಿಮಾನಗಡ್ಡಾ ನಗರ ಪ್ರಾಥಮಿಕ ಆರೋಗ್ಯ ವೈದ್ಯಾಧಿಕಾರಿ ಡಾ ಅಸ್ಫಾಕ್ ಹುಸೇನ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಮುಖ್ಯ ಶಿಕ್ಷಕರಾದ ಶ್ರೀನಿವಾಸ ರೆಡ್ಡಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜ ಕೆ, ಹೆಚ್ಐಓ ಅರುಣ್ ಕುಮಾರ್, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಮರಿಯಾ ರಾಣಿ, ಆಶಾ ಕಾರ್ಯಕರ್ತೆ ಬಸವೇಶ್ವರಿ ಸೇರಿದಂತೆ ಸಹ ಶಿಕ್ಷಕರು, ಮಕ್ಕಳು ಉಪಸ್ಥಿತರಿದ್ದರು.




# ಸ್ವಾವಲಂಬನೆಯ ನೂಲಿನಿಂದ ರಾಷ್ಟ್ರನಿರ್ಮಾಣದ ತನಕ

## (ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಉದಯ ಮತ್ತು ವಿಕಾಸದ ಸಂಶೋಧನಾತ್ಮಕ ಕಥನ)

■ ನೈಜ್ಯ ದೆಸೆ ಲೇಖನ

ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ತಿರುವಿ ನೋಡಿದರೆ, ಅಲ್ಲಿ ಗದ್ದುಗೆಗಳಿಗಿಂತ ಹೆಚ್ಚು ಗರಡಿಗಳು, ರಾಜಕೀಯ ಭಾಷಣಗಳಿಗಿಂತ ಹೆಚ್ಚು ಚರಕದ ಶಬ್ದ, ಮತ್ತು ಶಸ್ತ್ರಾಸ್ತ್ರಗಳಿಗಿಂತ ಹೆಚ್ಚು ಖಾದಿಯ ಬಿಳಿ ಬಣ್ಣ ನಮ್ಮನ್ನು ಎದುರುಗೊಳ್ಳುತ್ತದೆ.ಅದೇ ಬಿಳಿ ಬಣ್ಣ, ಲಕ್ಷಾಂತರ ಬಡವರ ಬದುಕಿಗೆ ಬೆಳಕು ನೀಡಿದ ಶಕ್ತಿಯಾಗಿ ಬೆಳೆದದ್ದು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ.ಖಾದಿ: ಬಟ್ಟೆಯಲ್ಲ, ಅದು ಚಳುವಳಿ,ಖಾದಿ ಎಂದರೆ ಕೇವಲ ನೆಯ್ದ ಬಟ್ಟೆಯಲ್ಲ,ಅದು ಸ್ವಾಭಿಮಾನ, ಸ್ವಾವಲಂಬನೆ, ಮತ್ತು ಗ್ರಾಮ ಭಾರತದ ಆತ್ಮ.ಮಹಾತ್ಮ ಗಾಂಧೀಜಿ ಖಾದಿಯನ್ನು ಪರಿಚಯಿಸಿದಾಗ, ಅವರ ಗುರಿ ವಸ್ತ್ರೋದ್ಯಮವಾಗಿರಲಿಲ್ಲ ಬದಲಿಗೆ,ಬಡವರ ಕೈಗೆ ಕೆಲಸ,ಗ್ರಾಮಗಳಿಗೆ ಉಸಿರು,ವಿದೇಶಿ ಶೋಷಣೆಗೆ ಅಂತ್ಯವಾಗಿತ್ತು.ಚರಕ ತಿರುಗಿದ ಪ್ರತೀ ಸುತ್ತು, ಸ್ವಾತಂತ್ರ್ಯದ ಘೋಷಣೆಯಂತಿತ್ತು.ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಸ್ಥಾಪನೆ:-ಸ್ವಾತಂತ್ರ್ಯ ನಂತರ ಗಾಂಧೀಜಿಯ ಕನಸನ್ನು ವ್ಯವಸ್ಥಿತವಾಗಿ ಮುಂದುವರೆಸಲು,1956ರಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ (KVIC) ಸ್ಥಾಪನೆಯಾಯಿತು.ಭಾರತದ ಸ್ವಾತಂತ್ರ್ಯ ಹೋರಾಟವು ಕೇವಲ ರಾಜಕೀಯ ಚಳವಳಿಯಾಗಿರಲಿಲ್ಲ. ಅದು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕಪುನರ್‌ರಚನೆಯ ಮಹಾಯಾತ್ರೆ. ಈ ಯಾತ್ರೆಯ ಕೇಂದ್ರಬಿಂದು ಖಾದಿ.ಖಾದಿ ಎಂಬುದು ಬಟ್ಟೆಯಲ್ಲ,ಅದು ಸ್ವಾವಲಂಬನೆಯ ಘೋಷಣೆ,ಅದು ಶ್ರಮಕ್ಕೆ ಗೌರವ,ಅದು ಗ್ರಾಮ ಭಾರತದ ಆತ್ಮದ ಪ್ರತಿಬಿಂಬ.ಈ ತತ್ವವನ್ನು ಬದುಕಿನಲ್ಲಿ ಜಾರಿಗೆ ತಂದ ಸಂಸ್ಥೆಯೇ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ (KVIC).ಗಾಂಧೀಜಿಯ ದೃಷ್ಟಿ: ಚರಕದಿಂದ ಚಿಂತನೆಗೆ ಮಹಾತ್ಮ ಗಾಂಧೀಜಿ ಭಾರತದ ಆರ್ಥಿಕ ದಾಸ್ಯತೆಯನ್ನು ಅರ್ಥಮಾಡಿಕೊಂಡಿದ್ದರು. ಬ್ರಿಟಿಷ್ ಆಳ್ವಿಕೆಯಲ್ಲಿ ಭಾರತವು:ಕಚ್ಚಾ ಹತ್ತಿಯನ್ನು ರಫ್ತು ಮಾಡಿ ತಯಾರಿತ ಬಟ್ಟೆಯನ್ನು ಆಮದು ಮಾಡಿಕೊಳ್ಳುತ್ತಿತ್ತು.ಇದು ಗ್ರಾಮೀಣ ಜನರ ಉದ್ಯೋಗವನ್ನು ನಾಶಮಾಡಿತ್ತು.ಅದಕ್ಕೆ ಮಹಾತ್ಮ ಗಾಂಧೀಜಿಯವರು ಪರಿಹಾರಗಳನ್ನು ಸೂಚಿಸಿದರು.ಪ್ರತೀ ಮನೆಗೂ ಚರಕ,ಪ್ರತೀ ಕೈಗೂ ಕೆಲಸ,ಪ್ರತೀ ಗ್ರಾಮಕ್ಕೂ ಸ್ವಾವಲಂಬನೆ,ಚರಕ ಯಂತ್ರವಲ್ಲ, ಅದು ಪ್ರತಿರೋಧದ ಸಂಕೇತ, ಅದು ಆರ್ಥಿಕ ಸ್ವಾತಂತ್ರ್ಯದ ಆಯುಧ ವೆಂಬುದನ್ನು ಜನಮಾನಸದಲ್ಲಿ ನೆಲೆಯೂರುವಂತೆ ಮಾಡಿದರು.ಸ್ವಾತಂತ್ರ್ಯ ನಂತರ ಹಲವು ಸವಾಲುಗಳು ಎದುರಾದವು.1947 ನಂತರ ಭಾರತ ಎದುರಿಸಿದ ದೊಡ್ಡ ಪ್ರಶ್ನೆ:"ಸ್ವಾತಂತ್ರ್ಯ ಸಿಕ್ಕಿತು, ಆದರೆ ಬಡತನಕ್ಕೆ ಏನು ಪರಿಹಾರ?"ಗ್ರಾಮಗಳು ನಿರುದ್ಯೋಗದಿಂದ ನರಳುತ್ತಿದ್ದವು. ಕೈಗಾರಿಕೆಗಳು ನಗರಗಳಿಗೆ ಸೀಮಿತವಾಗಿದ್ದವು. ಈ ಸಂದರ್ಭದಲ್ಲಿ ಗಾಂಧೀಜಿಯ ಆರ್ಥಿಕ ತತ್ವವನ್ನು ಮುಂದುವರಿಸಲು ಒಂದು ವ್ಯವಸ್ಥೆ ಅಗತ್ಯವಾಯಿತು.ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಸ್ಥಾಪನೆ.1956ರಲ್ಲಿ ಸಂಸತ್ತಿನ ಕಾಯ್ದೆಯಡಿಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಸ್ಥಾಪನೆಯಾಯಿತು.ಪ್ರಮುಖ ಗುರಿಗಳು:ಗ್ರಾಮೀಣ ಉದ್ಯೋಗ ಸೃಷ್ಟಿ ಸ್ವದೇಶಿ ಉತ್ಪಾದನೆಗೆ ಉತ್ತೇಜನ ಮಹಿಳೆಯರು, ಹಿಂದುಳಿದ ವರ್ಗಗಳ ಸಬಲೀಕರಣ,ನಗರ-ಗ್ರಾಮ ಅಸಮಾನತೆಯ ಇಳಿಕೆ.**KVIC** ಎಂದರೆ ಅಭಿವೃದ್ಧಿಯ ಇಲಾಖೆಯಲ್ಲ,ಅದು ಗ್ರಾಮ ಆಧಾರಿತ ಆರ್ಥಿಕ ಮಾದರಿ.ಖಾದಿ ಉತ್ಪಾದನೆ: ಶ್ರಮ ಮತ್ತು ಶುದ್ಧತೆಖಾದಿಯ ಉತ್ಪಾದನಾ ಪ್ರಕ್ರಿಯೆ:ಹತ್ತಿ ಬೆಳೆ,ಕೈಯಿಂದ ಹತ್ತಿಯನ್ನು ಸಂಸ್ಕರಿಸುವುದು.ಚರಕದಲ್ಲಿ ನೂಲುವುದು,ಈ ಪ್ರಕ್ರಿಯೆ:ಪ-ರಿಸರ ಸ್ನೇಹಿ,ಕಡಿಮೆ ಇಂಧನ ಬಳಕೆ,ಶೂನ್ಯ ಮಾಲಿನ್ಯಕ್ಕೆ,ಖಾದಿ, ಇಂದು ಜಗತ್ತು ಹುಡುಕುತ್ತಿರುವ ಸುಸ್ಥಿರವಾದ ಫ್ಯಾಷನ್ನಾಗಿದೆ.ಗ್ರಾಮೋದ್ಯೋಗಗಳ ವಿಶಾಲ ಜಗತ್ತು.ಏಗಿಖಅ ವ್ಯಾಪ್ತಿಯಲ್ಲಿರುವ ಗ್ರಾಮೋದ್ಯೋಗಗಳು:ಜೇನು ಸಾಕಾಣಿಕೆ,ಅಗರಬತ್ತಿಉದ್ಯಮ, ಕುಂಬಾರಿಕೆ,ಚರ್ಮೋದ್ಯಮ,ಆಹಾರ ಸಂಸ್ಕರಣೆ,-ಆಯುರ್ವೇದ ಔಷಧಿ ಉತ್ಪಾದನೆ,ಸಾಬೂನು, ತೈಲ, ಧೂಪ ,ಇವು ಕಡಿಮೆ ಬಂಡವಾಳ,ಹೆಚ್ಚಿನ ಉದ್ಯೋಗಸ್ಥಳೀಯ ಸಂಪನ್ಮೂಲ ಆಧಾರಿತ ಮಹಿಳಾ ಸಬಲೀಕರಣದ ಮೌನ ಕ್ರಾಂತಿಯಾಗಿದೆ.ಏಗಿಖಅ ಯೋಜನೆಗಳ ಅಡಿಯಲ್ಲಿ:ಲಕ್ಷಾಂತರ ಮಹಿಳೆಯರು ಸ್ವಯಂ ಉದ್ಯೋಗ ಪಡೆದಿದ್ದಾರೆ.ಸ್ವಸಹಾಯ ಗುಂಪುಗಳು ಬಲಪಡೆದಿವೆ,ಆರ್ಥಿಕ ಸ್ವಾತಂತ್ರ್ಯ ಸಾಧಿಸಿದ್ದಾರೆ,ಮಹಿಳೆ ಇಂದು ಕೆಲಸಗಾರಳಲ್ಲ ಉದ್ಯಮಿಯಾಗಿದ್ದಾಳೆ.ತಂತ್ರಜ್ಞಾನ ಮತ್ತು ಆಧುನಿಕತೆ ಇಂದು ಏಗಿಖಅ:ಡಿಸೈನರ್ ಖಾದಿ,ಫ್ಯಾಷನ್ ಇಂಡಸ್ಟ್ರಿಯಲ್ಲಿ ಪ್ರವೇಶ,ಇ-ಕಾಮರ್ಸ್,ಜಾಗತಿಕ ಮಾರುಕಟ್ಟೆ,ಬ್ರ್ಯಾಂಡಿಂಗ್ ಮತ್ತು ಮಾರ್ಕೆಟಿಂಗ್,ಖಾದಿ,ಪರಂಪರೆಯೊಂದಿಗೆ ತಂತ್ರಜ್ಞಾನ ಜೋಡಣೆಯಾಗಿದೆ.ಆರ್ಥಿಕ ಪ್ರಭಾವ: ಗ್ರಾಮೀಣ ಆದಾಯದಲ್ಲಿ ಸ್ಥಿರತೆ,ವಲಸೆ ತಗ್ಗಿಸುವಿಕೆ,ಸ್ವಯಂ ಉದ್ಯೋಗ ವೃದ್ಧಿಯಾಗುತ್ತದೆ.ಸಾಮಾಜಿಕ ಪ್ರಭಾವ:ಶ್ರಮದ ಗೌರವ,ಸಮಾನತೆ,ಸಮುದಾಯ ಆಧಾರಿತ ಅಭಿವೃದ್ಧಿ,ಪರಿಸರ ಪ್ರಭಾವ:ಕಡಿಮೆ ಕಾರ್ಬನ್,ಹಸಿರು ಉತ್ಪಾದನೆ.ಇಷ್ಟೆಲ್ಲ ಲಾಭಗಳಿದ್ದರೂ ಸವಾಲುಗಳೂ ಇದ್ದೇ ಇವೆ: ಯುವಕರ ಆಸಕ್ತಿ ಕೊರತೆ,ಮಾರುಕಟ್ಟೆ ಸ್ಪರ್ಧೆ,ಮಧ್ಯವರ್ತಿಗಳ ಪ್ರಭಾವ,ಆದರೆ, ಸುಧಾರಣೆಗಳೊಂದಿಗೆ ಏಗಿಖಅ ಮುಂದುವರಿಯುತ್ತಿದೆ.ಭವಿಷ್ಯದ ದೃಷ್ಟಿಯಲ್ಲಿ ನೋಡುವುದಾದರೆ ಯುವಕರಿಗೆ ಕೌಶಲ್ಯ ತರಬೇತಿ,ಸ್ಟಾರ್ಟ್‌ಅಪ್ ಮಾದರಿ, ಗ್ರಾಮೋದ್ಯೋಗ,ಖಾದಿ ಜಾಗತಿಕ ಬ್ರ್ಯಾಂಡಾಗಿ ಬೆಳೆಯಬೇಕ 'ಉಪಸಂಹಾರ:-ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಎಂದರೆ ಒಂದು ಸಂಸ್ಥೆಯಲ್ಲ ಅದು ಭಾರತದ ಆತ್ಮದ ನಿರಂತರ ಚಲನೆ.ಚರಕ ತಿರುಗುತ್ತಲೇ ಇರಬೇಕು,ಗ್ರಾಮ ಬಲಿಷ್ಠವಾಗುತ್ತಲೇ ಇರಬೇಕು,ಅದೇ ಭಾರತದ ನಿಜವಾದ ವಿಕಾಸ.








ಲೇಖನ
ಸುರೇಶ್ ಬಳಗಾನೂರು

## ಭಾರ ಎತ್ತುವಿಕೆ ಕಬಡ್ಡಿಯಲ್ಲಿ ಗಂಗಾಧರ ಜೂಲಗುಡ್ಡ ರಾಜ್ಯ ಮಟ್ಟಕ್ಕೆ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

ಮುದ್ದೇಬಿಹಾಳ: ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ವತಿಯಿಂದ ಪ್ರತಿವರ್ಷದಂತೆ ಈ ವರ್ಷವೂ ವಿವಿಧ ಸರ್ಕಾರಿ ಇಲಾಖೆಗಳ ನೌಕರರ ಭಾಗವಹಿಸುವಿಕೆಯಲ್ಲಿ ಜಿಲ್ಲಾ ಮಟ್ಟದ ಕ್ರೀಡಾಕೂಟಗಳು ವಿಜೃಂಭಣೆಯಿಂದ ನಡೆಯಿತು.ವಿಜಯಪುರ ಜಿಲ್ಲೆಯ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಈ ಕ್ರೀಡಾಕೂಟದಲ್ಲಿ ನೌಕರರು ಉತ್ಸಾಹದಿಂದ ಪಾಲ್ಗೊಂಡು ಕ್ರೀಡಾಸ್ಫೂರ್ತಿಯನ್ನು ಮೆರೆದರು.ಭಾರ ಎತ್ತುವ ಸ್ಪರ್ಧೆಯ 70 ಕೆ.ಜಿ ಪುರುಷರ ವಿಭಾಗದಲ್ಲಿ ಮುದ್ದೇಬಿಹಾಳ ತಾಲೂಕಿನ ನಾಲತವಾಡ ಹೋಬಳಿಯ ನಾಗಬೇನಾಳ ಗ್ರಾಮದ ನಿವಾಸಿ ಹಾಗೂ ಕಂದಾಯ ಇಲಾಖೆಯ ಗ್ರಾಮ ಲೆಕ್ಕಾಧಿಕಾರಿಗಳಾದ ಗಂಗಾಧರ ಜೂಲಗುಡ್ಡ ಅವರು ಅತ್ಯುತ್ತಮ ಸಾಧನೆ ತೋರಿ ಪ್ರಥ-'ಮ ಸ್ಥಾನ ಗಳಿಸಿದರು. ಈ ಮೂಲಕ ಅವರು ಜಿಲ್ಲಾ ಮಟ್ಟದಿಂದ ರಾಜ್ಯ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.ಇದೇ ವೇಳೆ ಕಬಡ್ಡಿ ತಂಡದ ಸ್ಪರ್ಧೆಯಲ್ಲಿಯೂ ಗಂಗಾಧರ ಜೂಲಗುಡ್ಡ ಅವರು ಪ್ರತಿನಿಧಿಸಿದ್ದ ತಂಡ ಉತ್ತಮ ಪ್ರದರ್ಶನ ನೀಡಿ ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದೆ. ಒಂದೇ ಸಮಯದಲ್ಲಿ ಭಾರ ಎತ್ತುವಿಕೆ ಹಾಗೂ ಕಬಡ್ಡಿ ಎರಡೂ ವಿಭಾಗಗಳಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುವುದು ವಿಶೇಷ ಸಾಧನೆಯಾಗಿದ್ದು, ಅವರ ಪ್ರತಿಭೆಗೆ ಎಲ್ಲೆಡೆಯಿಂದ ಪ್ರಶಂಸೆ ವ್ಯಕ್ತವಾಗಿದೆ. ಕಂದಾಯ ಇಲಾಖೆಯ ನೌಕರರ ಸಂಘದ ವಿಜಯಪುರ ಜಿಲ್ಲಾ ಅಧ್ಯಕ್ಷರಾಗಿರುವ ಗಂಗಾಧರ ಜೂಲಗುಡ್ಡ ಅವರ ಈ ಸಾಧನೆಗೆ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಪದಾಧಿಕಾ-ರಿಗಳು, ಕ್ರೀಡಾ ಮತ್ತು ಯುವಜನ ಸಬಲೀಕರಣ ಇಲಾಖೆಯ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಸಹೋದ್ಯೋಗಿಗಳು ಅಭಿನಂದನೆ ಸಲ್ಲಿಸಿ, ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಇನ್ನೂ ಉತ್ತಮ ಸಾಧನೆ ಮಾಡುವಂತೆ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಅಧಿಕಾ-ರಿಗಳು, ನೌಕರರು, ಕ್ರೀಡಾಭಿಮಾನಿಗಳು ಹಾಗೂ ಸಂಘದ ಮುಖಂಡರು ಉಪಸ್ಥಿತರಿದ್ದರು. ಸರಕಾರಿ ನೌಕರರಲ್ಲಿ ದೈಹಿಕ ಸಾಮರ್ಥ್ಯ, ಶಿಸ್ತು, ತಂಡಭಾವನೆ ಹಾಗೂ ಕ್ರೀಡಾ ಮನೋಭಾವ ಬೆಳೆಸುವಲ್ಲಿ ಇಂತಹ ಕ್ರೀಡಾಕೂಟಗಳು ಅಗತ್ಯವೆಂದು ಸಂಘದ ಮುಖಂಡರು ಅಭಿಪ್ರಾಯಪಟ್ಟರು.



## ಡಾ. ನಾಗಲಕ್ಷ್ಮೀ ಚೌಧರಿ ಅವರ ಜಿಲ್ಲಾ ಪ್ರವಾಸ ಫೆ. 5 ರಿಂದ

❑ ನೈಜ್ಯ ದೆಸೆ ನ್ಯೂಸ್

ಮುದ್ದೇಬಿಹಾಳ: ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ವತಿಯಿಂದ ಪ್ರತಿವರ್ಷದಂತೆ ಕೊಪ್ಪಳ : ರಾಜ್ಯ ಮಹಿಳಾ ಆಯೋಗ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಅವರು ಫೆ. 5 ರಿಂದ ಎರಡು ದಿನ ಜಿಲ್ಲೆಯಲ್ಲಿ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಅವರು ಫೆ.5 ರಂದು ಬೆಳಗ್ಗೆ 6.30 ಗಂಟೆಗೆ ಕೊಪ್ಪಳಕ್ಕೆ ಬಂದು. ಬೆಳಿಗ್ಗೆ 10 ಗಂಟೆಗೆ ಜಿಲ್ಲಾಡಳಿತ ಭವನದಲ್ಲಿ ಪಿಯು ಹಾಗೂ ಪದವಿ ಕಾಲೇಜು ವಿದ್ಯಾರ್ಥಿನಿಯರ ಜೊತೆ ಸಂವಾದ.ಮಧ್ಯಾಹ್ನ 2ಕ್ಕೆ ಕೊಪ್ಪಳದ ವಾರ್ಡ್ ನಂ.28, ಸಿದ್ದೇಶ್ವರ ನಗರದ ಅಲೆಮಾರಿ ಕಾಲೋನಿಗೆ ಭೇಟಿ ನೀಡಿ, ಅಲೆಮಾರಿ ಮಹಿಳೆಯರ ಸಮಸ್ಯೆಗಳನ್ನು ಆಲಿಸುವರು. ಅಂದು ಮಧ್ಯಾಹ್ನ 3ಕ್ಕೆ ತಾಪಂ ಸಭಾಂಗಣದಲ್ಲಿ ದೇವದಾಸಿ ಮಹಿಳೆಯರೊಂದಿಗೆ ಸಂವಾದ ನಡೆಸಿ. ಸಂಜೆ 6ಕ್ಕೆ ಅಲ್ಪಸಂಖ್ಯಾತರ ಪೋಸ್ಟ್ ಮೆಟ್ರಿಕ್ ಬಾಲಕಿಯರ ವಸತಿನಿಲಯಕ್ಕೆ ಭೇಟಿ ನೀಡಿದ ನಂತರ ಕೊಪ್ಪಳದಲ್ಲಿ ವಾಸ್ತವ್ಯ. ಮರುದಿನ ಬೆಳಗ್ಗೆ 10 ಗಂಟೆಗೆ ಕೊಪ್ಪಳ ವೈದ್ಯಕಿಯ ವಿಜ್ಞಾನ ಸಂಸ್ಥೆಯ ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಗೆ ಭೇಟಿ ನೀಡುವರು. ಬೆಳಗ್ಗೆ 11 ಕ್ಕೆ ಜಿಲ್ಲಾಡಳಿತ ಭವನದಲ್ಲಿ ರಾಜ್ಯ ಮಹಿಳಾ ಆಯೋಗ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಆಯೋಜಿಸುವ ಪಿಓಎ[illegible]ಚ್ ತರಬೇತಿ ಹಾಗೂ ಅರಿವು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 1.15 ಕ್ಕೆ ಕುಷ್ಟಗಿ ತಾಲೂಕು ಆಸ್ಪತ್ರೆಗೆ ಭೇಟಿ. ಮಧ್ಯಾಹ್ನ 3ಕ್ಕೆ ಕುಷ್ಟಗಿ ಪೊಲೀಸ್ ಠಾಣೆಗೆ ಭೇಟಿ. ಅಂದು ಸಂಜೆ 5 ಗಂಟೆಗೆ ಕುಷ್ಟಗಿ ಸಮಾಜ ಕಲ್ಯಾಣ ಇಲಾಖೆಯ ಪೋಸ್ಟ್ ಮೆಟ್ರಿಕ್ ಬಾಲಕಿಂ-ಯರ ವಸತಿ ನಿಲಯಕ್ಕೆ ಭೇಟಿ, ನಂತರ ಕೊಪ್ಪಳಕ್ಕೆ ಆಗಮಿಸಿ, ವಾಸ್ತವ್ಯ ಮಾಡುವರು. ಕೊನೆಯ ದಿನವಾದ ಫೆ.7 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದಲ್ಲಿ ಮಹಿಳಾ ಸ್ಪಂದನಾ ಕಾರ್ಯಕ್ರಮ ಹಾಗೂ ಮಹಿಳಾ ಪ್ರಗತಿ ಪರಿಶೀಲನಾ ಸಭೆ ನಡೆಸಿ. ಮಧ್ಯಾಹ್ನ 3ಕ್ಕೆ ಪತ್ರಿಕಾಗೋಷ್ಠಿಯಲ್ಲಿ ಪಾಲ್ಗೋಳ್ಳುವರು. ಅಂದು ಸಂಜೆ 6.30ಕ್ಕೆ ಕೊಪ್ಪಳದಿಂದ ರೈಲಿನ ಮೂಲಕ ಬೆಂಗಳೂರು ಕಡೆ ಪ್ರಯಾಣ ಬೆಳೆಸುವರು ಎಂದು ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101